ಹರಿಹರನ ಐದು ರಗಳೆಗಳು

ಸಂಪಾದಕಿ

ಎಂ. ಎಸ್. ಲೀಲಾವತಿ

ಕನ್ನಡ ಅಧ್ಯಯನ ಸಂಸ್ಥೆ : : ಮೈಸೂರು ವಿಶ್ವವಿದ್ಯಾನಿಲಯ





ಕನ್ನಡ ಅಧ್ಯಯನ ಸಂಸ್ಥೆ

ಪ್ರಾಚ್ಯ ಕಾವ್ಯಮಾಲೆ-೨೮

ಪ್ರಧಾನ ಸಂಪಾದಕ

ಡಾ. ಹಾ. ಮಾ. ನಾಯಕ

ವಿಭಾಗ ಸಂಪಾದಕ

ಎನ್. ಬಸವಾರಾಧ್ಯ

ಹರಿಹರನ ಐದು ರಗಳೆಗಳು

ಹರಿಹರನ ಐದು ರಗಳೆಗಳು

ಸಂಪಾದಕಿ

ಎಂ. ಎನ್. ಲೀಲಾವತಿ

ಕನ್ನಡ ಅಧ್ಯಯನ ಸಂಸ್ಥೆ

ಮೈಸೂರು ವಿಶ್ವವಿದ್ಯಾನಿಲಯ

೧೯೭೩

HARIHARANA AIDU RAGALEGALU— edited by M.N. Leelavathi; published by the Institute of Kannada Studies, Manasagangotri, University of Mysore, Mysore-6. First Edition 1973, Pp xxxii+89.

ಬೆಲೆ

ಸಾದಾ ಪ್ರತಿ : ರೂ. [illegible]

ಉತ್ತಮ ಪ್ರತಿ : ರೂ. [illegible]

ಮಾರಾಟಗಾರರು

ಡೈರೆಕ್ಟರ್

ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು

ಮುದ್ರಕರು

ಯು. ಎಸ್. ಪ್ರಿಂಟರ್ಸ್, ಚಾಮುಂಡಿಪುರಂ, ಮೈಸೂರು-೪

ಮುನ್ನುಡಿ

ಕನ್ನಡ ಅಧ್ಯಯನಕ್ಕೆ ಸಂಬಂಧಪಟ್ಟ ಚಟುವಟಿಕೆಗಳೆಲ್ಲವನ್ನೂ ಕೇಂದ್ರೀಕರಿಸುವ ದೃಷ್ಟಿಯಿಂದ 1966ರ ಕೊನೆಯಲ್ಲಿ ಪ್ರಾಚ್ಯಸಂಶೋಧನಾಲಯದ ಕನ್ನಡ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಲೀನಗೊಳಿಸಲಾಯಿತು. ಅಂದಿನಿಂದ ಈ ವಿಭಾಗವನ್ನು ಅಧ್ಯಯನ ಸಂಸ್ಥೆಯ 'ಸಂಪಾದನ ವಿಭಾಗ'ವೆಂದು ಹೆಸರಿಸಲಾಯಿತು. ಕ್ರಿ.ಶ. 1436ರಲ್ಲಿ ಪ್ರತಿಮಾಡಲಾಗಿರುವ 'ಪುಷ್ಪದಂತ ಪುರಾಣ'ದ ಹಸ್ತಪ್ರತಿಯಿಂದ ಹಿಡಿದು 1850 ರಲ್ಲಿ ರಚಿತವಾಗಿರುವ 'ಪ್ರಭಾವತಿ ಪರಿಣಯ'ದ ಹಸ್ತಪ್ರತಿ ವರೆಗೆ ಇಂದು 5,000ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಹೊಂದಿರುವ 'ಸಂಪಾದನ ವಿಭಾಗ' ಅಧ್ಯಯನ ಸಂಸ್ಥೆಯ ಒಂದು ಪ್ರಧಾನ ಅಂಗವಾಗಿದೆ. ಕನ್ನಡ ಭಾಷಾ ಸಾಹಿತ್ಯಗಳಿಗೆ ಸಂಬಂಧಿಸಿದ ಅಧ್ಯಯನವನ್ನು ಕೈಗೊಳ್ಳುವವರಿಗೆ, ಸಂಶೋಧಕರಿಗೆ, ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ವಿದ್ಯಾರ್ಥಿಗಳಿಗೆ ಇದು ಆಕರ ಗ್ರಂಥಗಳ ತವರಾಗಿದೆ, ಪ್ರೇರಣೆಯ ಸ್ರೋತವಾಗಿದೆ.

ಮುದ್ರಣ ಸೌಲಭ್ಯ ಈಗ್ಗೆ ಕೆಲವು ಶತಮಾನಗಳಿಂದೀಚೆಗೆ ಮಾನವ ಜನಾಂಗಕ್ಕೆ ದೊರೆತ ವರ. ಈ ಸೌಲಭ್ಯವಿಲ್ಲದಿದ್ದ ಕಾಲದಲ್ಲಿ ಓಲೆಗರಿ ಅಥವಾ ತಾಡಪತ್ರದ ಮೇಲೆ ಕಂಠದಿಂದ ಕೊರೆದು, ಅನನ್ಯಶ್ರದ್ಧೆಯಿಂದ ಆ ಸಾಹಿತ್ಯವನ್ನು ಅಭ್ಯಸಿಸಿ, ಅದನ್ನು ಕಾಯ್ದುಕೊಂಡು ಬಂದ ಹಿರಿಯರಿಂದ ಅಂದಿನ ಅಪೂರ್ವ ಸಾಹಿತ್ಯ ನಮ್ಮ ಸಂಪತ್ತಾಗಿ ಉಳಿದಿದೆ. ತಮಗೆ ಪ್ರಿಯವೆನಿಸಿದ ಸಾಹಿತ್ಯಕೃತಿಗಳನ್ನು ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದು ಆ ಕಾಲದ ಒಂದು ಬಗೆಯ ಹವ್ಯಾಸವೇ ಆಗಿತ್ತು. ಈ ಕಾರಣದಿಂದಾಗಿಯೇ, ಓಲೆಗರಿಯ ಒಂದು ಸಂಪುಟದಲ್ಲಿಯೇ ಅನೇಕ ಗ್ರಂಥಗಳನ್ನು, ಗ್ರಂಥಭಾಗಗಳನ್ನು ಪ್ರತಿಲಿಪೀಕರಿಸಿರುವುದನ್ನು ಕಾಣುತ್ತೇವೆ. ಹಸ್ತಪ್ರತಿಗಳ ಅನೇಕ ಪ್ರತಿಗಳನ್ನು ಸಿದ್ಧಪಡಿಸಿ ಹಂಚುವುದನ್ನೂ ಪುಣ್ಯಕಾರ್ಯವೆಂದು ಬಗೆದು ಆ ರೀತಿ ಮಾಡುತ್ತಿದ್ದುದಕ್ಕೂ ಉದಾಹರಣೆಗಳಿವೆ. ಪ್ರತಿಲಿಪೀಕರಣ ಹಲವರಿಗೆ ಜೀವನೋಪಾಯದ ಸಾಧನವಾಗಿಯೂ ಇತ್ತು. ಹಸ್ತಪ್ರತಿಗಳನ್ನು ಸುಂದರ ಸಂದರ್ಭೋಚಿತ ಚಿತ್ರಗಳಿಂದ ಅಲಂಕರಿಸುವ ವಾಡಿಕೆಯೂ ಇತ್ತು. ಇವು ನಮ್ಮ ಜನಗಳ ಸಾಹಿತ್ಯ-ಶಾಸ್ತ್ರ-ಕಲಾಭಿರುಚಿಯ ಪ್ರತೀಕವಾಗಿವೆ.

ಸಂಸ್ಕೃತಿ, ಇತಿಹಾಸ, ಭಾಷಾಚರಿತ್ರೆ—ಇವುಗಳ ಸಮಗ್ರ ಅರಿವಿಗೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯ ಅತ್ಯಾವಶ್ಯಕ. ಅಷ್ಟೆ ಅಲ್ಲ, ಕೋಶ ಅಥವಾ ನಿಘಂಟುಗಳ ರಚನೆಗೆ, ಅವುಗಳ ಮೂಲಘಟಕಗಳಾದ ಶಬ್ದಗಳ ಅರ್ಥನಿರ್ಧಾರಕ್ಕೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯಕೃತಿಗಳು ಅನಿವಾರ್ಯವಾಗುತ್ತವೆ. ಸಾಂಸ್ಕೃತಿಕ ಮತ್ತು ಐತಿಹಾಸಿಕ ಪುನರ್‌ರಚನೆಗೆ ಅಗತ್ಯವಾಗಿ ಬೇಕಾಗಿರುವ ಅನೇಕ ಗ್ರಂಥಗಳು ಇಂದಿಗೂ ಅನುಪಲಬ್ಧವಾಗಿವೆ. ಶಾಸನಗಳಲ್ಲಿ, ಅನ್ಯಕವಿಗಳ ಕೃತಿಗಳಲ್ಲಿ ಉಕ್ತವಾಗಿರುವುದರಿಂದ ಮಾತ್ರ ಹಲವು ಕವಿಗಳ ಮತ್ತು ಗ್ರಂಥಗಳ ಹೆಸರುಗಳು ತಿಳಿದುಬರುತ್ತವೆ. ಕಾವ್ಯಪ್ರಯೋಗ ಪರಿಣತಮತಿಗಳಾಗಿದ್ದ ಕನ್ನಡ ಜನತೆಯ ಬಳಿ ಒಂದು ಕಾಲದಲ್ಲಿ ಇವೆಲ್ಲ

ಲಭ್ಯವಾಗಿದ್ದಿರಬೇಕು. ನಾಡಿನ ಹಲನೆಡೆಗಳಲ್ಲಿ ಓಲೆಗರಿಯ ಸಾಹಿತ್ಯ ಅನೇಕ ಶತಮಾನಗಳವರೆಗೆ ತನ್ನ ವೈಭವನನ್ನು ಮೆರೆದಿತ್ತು. ಕಾವ್ಯಪಾರಾಯಣ ಸಾಂಸ್ಕೃತಿಕ ಜೀವನದ ಅಂಗವಾಗಿ ಪರಿಣಮಿಸಿತ್ತು. ಕಾಲಕ್ರಮದಲ್ಲಿ ದೇಶ ಕಾಲ ಪರಿಸರಗಳ ಪ್ರಭಾವದಿಂದ, ಜನತೆಯ ಅಜ್ಞಾನ, ಅಶ್ರದ್ಧೆ ಮತ್ತು ಔದಾಸೀನ್ಯಗಳ ಫಲವಾಗಿ ಅವು ಮೂಲೆಗುಂಪಾಗುತ್ತ ಬಂದು ಕೀಟಗಳಿಗೆ ಆಹಾರವಾಗತೊಡಗಿದವು. ಅವುಗಳನ್ನು ಸಂರಕ್ಷಿಸಲಾರದೆ ನದಿಯ ಪಾಲೋ ಬೆಂಕಿಯ ಪಾಲೋ ಮಾಡುತ್ತಿದ್ದ ಉದಾಹರಣೆಗಳೂ ಅಸಂಖ್ಯವಾಗಿವೆ. ಮತ್ತೆ ಕೆಲನೆಡೆಗಳಲ್ಲಿ ನವರಾತ್ರಿಯಂದು ಬೆಳಕು ಕಂಡು, ಪೂಜಾರ್ಹವಾಗಿ, ಹಾಲುಂಡು ಮತ್ತೆ ಕತ್ತಲಕೋಣೆಯ ಮೂಲೆ ಸೇರಬೇಕಾದ ದುಸ್ಥಿತಿ ಒದಗಿ ಹಲವಾರು ಅಮೂಲ್ಯ ಪ್ರತಿಗಳು ತ್ರುಟಿತವಾಗಿ ಹೋಗಿವೆ. ಇಂಥ ಮೌಢ್ಯವನ್ನು ದೂರಮಾಡಿ ಹಸ್ತಪ್ರತಿಗಳನ್ನು ಹೊರಗೆಳೆದು ಅವುಗಳನ್ನು ಕೊಂಡು ಇಲ್ಲವೆ ಎರವಲಾಗಿ ಪಡೆದು ಪರೀಕ್ಷಿಸಿ, ಸಂಪಾದಿಸುವ ಹೊಣೆಯನ್ನು ಈ ಸಂಸ್ಥೆಯ ಸಂಪಾದನ ವಿಭಾಗ ವಹಿಸಿದೆ.

ಅನುಪಲಬ್ಧವಾಗಿರುವ ಸಾಹಿತ್ಯರಾಶಿಯನ್ನು ಹೊರತರಲು, ಉಪಲಬ್ಧ ಸಾಹಿತ್ಯಕ್ಕೆ ಪರಿಷ್ಕಾರ ನೀಡಲು ಹಸ್ತಪ್ರತಿಗಳ ಸಂಗ್ರಹಕಾರ್ಯ ಸತತವಾಗಿ ನಡೆಯಬೇಕಾಗಿದೆ. ಸಾಹಿತ್ಯಿಕ ಚಟುವಟಿಕೆಯ ಕೇಂದ್ರಗಳಾಗಿದ್ದ ಎಡೆಗಳಲ್ಲಿ, ಕವಿಗಳ ಕೀರ್ತಿ ಹರಡಿದ್ದ ಪ್ರದೇಶಗಳಲ್ಲಿ, ಜ್ಞಾನಗಂಗೆಯನ್ನು ಮನೆಮನೆಯ ಬಾಗಿಲಿಗೆ ಕೊಂಡೊಯ್ದ ಶಿವಶರಣರು ಮತ್ತು ದಾಸರುಗಳು ಸಂಚರಿಸುತ್ತಿದ್ದ ಸ್ಥಳಗಳಲ್ಲಿ, ಅವರ ನೆನಪಿಗಾಗಿ ಮಠಗಳು ಸ್ಮಾರಕಗಳು ನಿರ್ಮಿತವಾಗಿರುವ ಕಡೆಗಳಲ್ಲಿ, ಅನುಯಾಯಿಗಳ ಮತ್ತು ಭಕ್ತರ ಮನೆಗಳಲ್ಲಿ, ಸಾಹಿತ್ಯೋಪಾಸಕರ ಬಳಿಯಲ್ಲಿ ಹೇಗೋ ಎಂತೋ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನು ಸಂಗ್ರಹಿಸಿ ರಕ್ಷಿಸಬೇಕಾಗಿದೆ. ಈ ಸಂಸ್ಥೆಯ ಹಸ್ತಪ್ರತಿಯ ಭಂಡಾರವನ್ನು ಈ ದೃಷ್ಟಿಯಿಂದ ಬೆಳೆಸಿಕೊಂಡು ಬರುವತ್ತ ಆದ್ಯಗಮನ ಕೊಡಲಾಗಿದೆ.

ಸಂಗ್ರಹಿಸಿದ ಪ್ರತಿಗಳನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುವುದೂ ಅತ್ಯಂತ ಮುಖ್ಯವಾದ ಹೊಣೆ. ಕೀಟಗಳ ಹಾವಳಿಗೆ ಸಿಕ್ಕಿ ಪ್ರತಿಗಳು ಶಿಥಿಲವಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಸಾಧ್ಯವಾದಷ್ಟು ಸಲ ಅವುಗಳನ್ನು ಸ್ವಚ್ಛಗೊಳಿಸುವುದು, ಕೀಟನಿರೋಧಕ ತೈಲಲೇಪನಮಾಡುವುದು, ವಾಯುನಿಯಂತ್ರಿತ ಕೊಠಡಿಯಲ್ಲಿಟ್ಟು ಪ್ರಧೂಮನ ಉಪಚಾರ ನೀಡುವುದು (Fumigation treatment), ತೀರ ತ್ರುಟಿತವಾದ ಹಸ್ತಪ್ರತಿಗಳನ್ನು ಮೈಕ್ರೊಫಿಲಂಗಳಲ್ಲಿ ಶಾಶ್ವತಗೊಳಿಸುವುದು ಅಗತ್ಯವಾಗುತ್ತದೆ. ಈ ರೀತಿ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬರುವುದು ವ್ಯಕ್ತಿಗಳಿಗೆ ಶ್ರಮಸಾಧ್ಯವಾದ ಹಾಗೂ ಆರ್ಥಿಕವಾಗಿ ಸುಲಭಸಾಧ್ಯವಲ್ಲದ ಕಾರ್ಯ. ಕನ್ನಡ ಅಧ್ಯಯನ ಸಂಸ್ಥೆ ಹಸ್ತಪ್ರತಿಗಳ ಸಂರಕ್ಷಣೆಗೆ ಅಗತ್ಯವಾದ ಎಲ್ಲ ಕ್ರಮಗಳನ್ನೂ ಕೈಗೊಂಡಿದೆ.

ಗ್ರಂಥಸಂಪಾದನೆ ಶ್ರಮಸಾಧ್ಯವಾದ ಕಾರ್ಯ; ವ್ಯುತ್ಪತ್ತಿ, ವಿದ್ವತ್ತು, ಪ್ರತಿಭೆ ಮೇಳವಿಸಿರುವ ಸಮರ್ಥರು ಕೈಗೊಳ್ಳಬೇಕಾದ ಕಾರ್ಯ. ಈ ಕಾರ್ಯದಲ್ಲಿ ಹಲವಾರು ಭಾಷೆಗಳ, ಶಾಸ್ತ್ರಗಳ ಪರಿಚಯವೂ ಅಗತ್ಯವಾಗುತ್ತದೆ. ಹಸ್ತಪ್ರತಿಗಳೂ ಕಾಲ, ದೇಶ ಮತ್ತು ಪರಿಸರಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಸಾಹಿತ್ಯಾಭ್ಯಾಸಿಗಳು ಹಸ್ತಪ್ರತಿಗಳ ಮೇಲೆ ಟಿಪ್ಪಣಿಗಳನ್ನು, ತಮ್ಮ ಅನಿಸಿಕೆಗಳನ್ನು ಬರೆದುಬಿಡುತ್ತಿದ್ದುದೂ ಉಂಟು. ಕಾಲ ಕ್ರಮದಲ್ಲಿ ಅವು ಮೂಲದ ಅಂಗವೋ ಎಂಬಂತೆ ಸೇರಿಬಿಡುತ್ತಿದ್ದುದೂ ಸಹಜವೇ. ಪ್ರತಿಭಾವಂತರೂ ವ್ಯುತ್ಪನ್ನಮತಿಗಳೂ ಕಾವ್ಯರಚನಾಸಮರ್ಥರೂ ಮೂಲವನ್ನು ಕೆಲವು ವೇಳೆ ಉತ್ತಮಪಡಿಸಿ, ಕೆಲವು ವೇಳೆ ಕೆಡಿಸಿ, ಅರ್ಥಸೌಲಭ್ಯಕ್ಕಾಗಿ ಅರ್ಥವಾಗುವಂತಹ ಪಾಠಾಂತರಗಳನ್ನು ಕಲ್ಪಿಸಿ ಅಲ್ಲಲ್ಲಿ ಮೂಲಧಾಟಿಗೆ ಭಂಗಬರದಂತೆ ತಮ್ಮ ಸ್ವಂತರಚನೆಗಳನ್ನು ಪ್ರಕ್ಷೇಪಿಸಿಬಿಟ್ಟಿರುವುದೂ ಉಂಟು. ಇಂತಹ ಪ್ರಕ್ಷೇಪಗಳು ಕೆಲವೊಮ್ಮೆ ಸನ್ನಿವೇಶದ ಪ್ರಭಾವವನ್ನು ಹೆಚ್ಚಿಸಿರುವುದೂ ಉಂಟು; (ಒಂದು ವೇಳೆ ವಾಸ್ತವವಾಗಿ, ಹಾಗಾಗದಿದ್ದರೂ ಪ್ರಕ್ಷೇಪಕರು ಹಾಗೆ ಭಾವಿಸಿಕೊಂಡದ್ದು ತಮ್ಮ ಚಪಲವನ್ನು ತೀರಿಸಿಕೊಂಡದ್ದೂ ಸತ್ಯ!) ಒಟ್ಟಿನಲ್ಲಿ ಅನಾವಶ್ಯಕ ವಿಸ್ತರಣಕ್ಕೆ ಕಾರಣವಾಗಿ ಕೃತಿಯ ಗಾತ್ರದ ಹೆಚ್ಚಳಕ್ಕೆ ಮಾತ್ರ ನೆರವಾಗಿರುವುದೂ ಉಂಟು. ಲಿಪಿಕಾರರೂ ಅನೇಕ ವೇಳೆ ತಮಗೆ ಸರಿದೋರಿದಂತೆ ಅಥವಾ ಸೂಕ್ತಕಂಡಂತೆ ಶಬ್ದರೂಪಗಳನ್ನು ಬದಲಾಯಿಸಿ ಅಥವಾ ಬೇರೆ ಶಬ್ದವನ್ನು ತಂದು ಗಿಡಿದು, ತಿಳಿದೋ ತಿಳಿಯದೆಯೋ ಮೂಲಕ್ಕೆ ತಿದ್ದುಪಡಿಗಳನ್ನು ತಂದುಬಿಡುತ್ತಿದ್ದುದುಂಟು. ಇಂತಹ ಅನೇಕ ಕಾರಣಗಳಿಂದಾಗಿ ಒಂದೇ ಕೃತಿಯ ಹಲವು ಪ್ರತಿಗಳಲ್ಲಿ ಪಾಠವ್ಯತ್ಯಾಸಗಳು ಕಂಡುಬರುತ್ತವೆ. ಒಂದೊಂದೇ ಪ್ರತಿಗಳು ದೊರಕಿದ್ದು ಅವೂ ತ್ರುಟಿತವಾಗಿರುವಂತಹ ಸಂದರ್ಭಗಳಲ್ಲಿ ಮೂಲಪ್ರತಿಯ ಪಾಠವನ್ನು ಪುನರ್ ರಚಿಸಬೇಕಾಗುತ್ತದೆ. ಇದು ನಿಜಕ್ಕೂ ಪ್ರತಿಭೆಯ ಕೆಲಸವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಂಪಾದಕನ ಪರೀಕ್ಷೆಯೇ ನಡೆದುಹೋಗುತ್ತದೆ. ವಿದ್ವತ್ತಿನ ಹಿನ್ನೆಲೆಯಲ್ಲಿ ತಾಳ್ಮೆ, ಶ್ರಮಸಹಿಷ್ಣುತೆ ಇಲ್ಲವಾದರೆ ಈ ಕ್ಷೇತ್ರದಲ್ಲಿ ಯಶಸ್ಸು ಪಡೆಯುವುದು ಸಾಧ್ಯವಾಗುವುದಿಲ್ಲ. ಗ್ರಂಥಸಂಪಾದನೆ ಇಂದು ವಿಶಿಷ್ಟ ಶಾಸ್ತ್ರವಾಗಿಯೇ ಬೆಳೆದಿದೆ.

'ಸಂಪಾದನೆ ವಿಭಾಗ' ಹಲವಾರು ಸಾಹಿತ್ಯ ಮತ್ತು ಶಾಸ್ತ್ರಗ್ರಂಥಗಳನ್ನು ವೈಜ್ಞಾನಿಕವಾಗಿ ಸಂಪಾದಿಸಿ, ಪಾಠಗಳನ್ನು ನಿರ್ಧರಿಸಿ, ಪಾಠಾಂತರಗಳನ್ನು ಒದಗಿಸಿ, ವಿಸ್ತಾರವಾದ ಪೀಠಿಕೆಗಳನ್ನು ಬರೆದು, ಕವಿಯ ಕಾಲ, ದೇಶ, ಕೃತಿಗಳ ವಿಚಾರವನ್ನು ಚರ್ಚಿಸಿ, ಅವುಗಳ ಸಾಹಿತ್ಯಿಕ ಮೌಲ್ಯವನ್ನು ಪರಿಶೀಲಿಸಿ, ಅಗತ್ಯವಾದಲ್ಲಿ ಟಿಪ್ಪಣಿ ಮತ್ತು ವ್ಯಾಖ್ಯಾನಗಳನ್ನು ನೀಡಿ, ಕೆಲವು ಸಂದರ್ಭಗಳಲ್ಲಿ ಗದ್ಯಾನುವಾದಗಳನ್ನು ಕೊಟ್ಟು, ಅರ್ಥಕೋಶವನ್ನು ಒದಗಿಸಿ ಬೆಳಕಿಗೆ ತರುತ್ತಿದೆ.

ಇದುವರೆಗೆ ಸಂಪಾದನ ವಿಭಾಗದ ಸಂಶೋಧನ ಸಹಾಯಕರು ಸಿದ್ಧಪಡಿಸಿದ್ದ ಕೃತಿಗಳನ್ನು ಮಾತ್ರ ಪ್ರಕಟಿಸಲಾಗುತ್ತಿತ್ತು. ಈಗ ಈ ವಿಭಾಗದಲ್ಲಿ ಸಂಗ್ರಹಿತವಾಗಿರುವ

ಹಸ್ತಪ್ರತಿಗಳನ್ನುಪಯೋಗಿಸಿಕೊಂಡು ಹೊರಗಿನವರೂ ಸಂಪಾದಿಸಬಹುದಾದ ಗ್ರಂಥಗಳನ್ನೂ ಪ್ರಕಟಿಸಲು ಯೋಚಿಸಲಾಗಿದೆ. ಇದರಿಂದ ಪ್ರಕಟಣೆಯ ಕೆಲಸ ತ್ವರಿತಗೊಳ್ಳುತ್ತದೆ. ಹಸ್ತಪ್ರತಿಗಳಲ್ಲೇ ಉಳಿದು ಸಾಮಾನ್ಯರ ಕೈಗೆಟುಕದ ಗ್ರಂಥಗಳನ್ನು ಸರ್ವರ ಸ್ವತ್ತಾಗಿಸುವ ಉದ್ದೇಶವೂ ತೀವ್ರಗೊಳ್ಳುತ್ತದೆ.

ಸಂಪಾದನ ವಿಭಾಗ ಸಂಕಲಿತ ಗ್ರಂಥಗಳನ್ನು ಹೊರತರುವಲ್ಲಿಯೂ ನಮಗೆ ನೆರವಾಗುತ್ತಿದೆ. ಎರಡು ಸಾವಿರ ವರ್ಷಗಳ ಸುದೀರ್ಘ ಪರಂಪರೆಯುಳ್ಳ ಕನ್ನಡ ಸಾಹಿತ್ಯದ ಸಿಂಹಾವಲೋಕನ ಮಾಡಿಸುವಂತಹ ಪ್ರಾತಿನಿಧಿಕ ಸಂಕಲನ ಗ್ರಂಥಗಳನ್ನು ಸಿದ್ಧಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಲಾಗುತ್ತಿರುವ ಈ ಗ್ರಂಥಗಳು ಆಯಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಕನ್ನಡ ಸಾಹಿತ್ಯದ ಪರಿಚಯವನ್ನು ಬಯಸುವವರಿಗೂ ಉಪಯುಕ್ತವಾಗುತ್ತವೆ. ಇಂಥ ಸಂಕಲನಗಳನ್ನು ಸಿದ್ಧಪಡಿಸುವುದೂ ಸಂಪಾದನ ವಿಭಾಗದ ಒಂದು ಪ್ರಮುಖ ಹೊಣೆಯಾಗಿದೆ.

ಈಗ ಪ್ರಕಟವಾಗುತ್ತಿರುವ 'ಹರಿಹರನ ಐದು ರಗಳೆಗಳು' ಅಧ್ಯಯನ ಸಂಸ್ಥೆಯ ಪ್ರಾಚ್ಯಕಾವ್ಯಮಾಲೆಯ ಇಪ್ಪತ್ತೇಳನೆಯ ಪ್ರಕಟಣೆಯಾಗಿದೆ. ಸಂಪಾದನ ವಿಭಾಗದ ಉಪನಿರ್ದೇಶಕರಾದ ಶ್ರೀ ಎನ್. ಬಸವಾರಾಧ್ಯರ ನೇತೃತ್ವದಲ್ಲಿ ಸಂಪಾದಕಿ ಶ್ರೀಮತಿ ಎಂ.ಎನ್. ಲೀಲಾವತಿ ಅವರು 'ಹರಿಹರನ ಐದು ರಗಳೆ'ಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ. ಈ ಗ್ರಂಥವನ್ನು ಸಿದ್ಧಪಡಿಸಿಕೊಟ್ಟ ಶ್ರೀಮತಿ ಎಂ. ಎನ್. ಲೀಲಾವತಿ ಅವರಿಗೂ ಶೀಘ್ರವಾಗಿ ಮುದ್ರಿಸಿಕೊಟ್ಟಿರುವ ಯು. ಎಸ್. ಪ್ರಿಂಟರ್ಸ್ ಅವರಿಗೂ ನಮ್ಮ ವಂದನೆಗಳು.

ಕನ್ನಡ ಅಧ್ಯಯನ ಸಂಸ್ಥೆ
೧-೩-೧೯೭೩

ಹಾ. ಮಾ. ನಾಯಕ
ಪ್ರಧಾನ ಸಂಪಾದಕ

ವಿಭಾಗ ಸಂಪಾದಕರ ಮಾತು

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹರಿಹರನ ಹೆಸರು ಶಾಶ್ವತವಾಗಿ ನಿಲ್ಲುವಂತಹುದು. ಶಿವಶರಣರ ಚರಿತ್ರೆಯನ್ನು ತನುವುಬ್ಬಿ ಮನವುಬ್ಬಿ ಹಾಡಿದವನು ಹರಿಹರ. ಈತ ಕನ್ನಡದಲ್ಲಿ ರಗಳೆ ಎಂಬ ಛಂದಸ್ಸಿನ ಒಂದು ಪ್ರಕಾರವನ್ನು ಪ್ರಾರಂಭಿಸಿದನು. ಈತನು ತರುವಾಯದ ಕವಿಗಳಿಗೆ ಸ್ಫೂರ್ತಿಯನ್ನೂ ನವಚೇತನವನ್ನೂ ನೀಡಿದ್ದಾನೆ. ಆದುದರಿಂದಲೇ ಮುಂದೆ ಬಂದ ಅನೇಕ ಕವಿಗಳು ಈತನನ್ನು ಮುಕ್ತಕಂಠದಿಂದ ಸ್ಮರಿಸಿ ಹಾಡಿ ಹೊಗಳಿ ತಮ್ಮ ಕೃತಿಗಳನ್ನು ಪ್ರಾರಂಭಿಸಿದ್ದಾರೆ. ಭಕ್ತಿ ವಿರಕ್ತಿಗಳೆರಡರ ಸಾಕಾರಸ್ವರೂಪವೇ ಹರಿಹರ. ಈತನ ಜೀವನ ಚರಿತ್ರೆಯೇ ಒಂದು ಪವಾಡದಂತಿದೆ. ಹನ್ನೆರಡನೆಯ ಶತಮಾನದ ಪ್ರಮುಖ ವಚನ ಕಾರರನ್ನು ಕುರಿತು ಚಾರಿತ್ರಿಕ ಮಾಹಿತಿಯಿಂದ ಕೂಡಿದ ರಗಳೆಗಳನ್ನು ಬರೆದಿರುವವರಲ್ಲಿ ಹರಿಹರನೇ ಮೊಟ್ಟಮೊದಲಿಗ. ಲೌಕಿಕ ಲಾಭದಾಶೆಗಳನ್ನು ಕಡೆಗಣಿಸಿ ಪಾರಮಾರ್ಥಿಕದಲ್ಲಿ ಮನ ನಿಲ್ಲಿಸಿದವನು ಈತ. ತನ್ನ ಎಲ್ಲ ಕೃತಿಗಳನ್ನೂ ವಿರೂಪಾಕ್ಷನ ಅಂಕಿತದಲ್ಲೇ ಬರೆದು ವಿರೂಪಾಕ್ಷನನ್ನು ಸಾಕ್ಷಾತ್ಕಾರ ಮಾಡಿಕೊಂಡು ಕೊನೆಗೆ ವಿರೂಪಾಕ್ಷನಲ್ಲೇ ಐಕ್ಯನಾದವನು ಹರಿಹರ.

ಗಿರಿಜಾಕಲ್ಯಾಣ, ರಕ್ಷಾಶತಕ, ಪಂಪಾಶತಕ, ಮುಡಿಗೆಯ ಅಷ್ಟಕ, ಶಿವಶರಣರ ರಗಳೆಗಳು—ಇವು ಹರಿಹರನ ಕೃತಿಗಳು. ಈತನು ಬರೆದಿರುವ ಶಿವಶರಣರ ರಗಳೆಗಳ ಸಂಖ್ಯೆ ಎಷ್ಟೆಂಬುದು ಒಂದು ಸಮಸ್ಯೆಯಾಗಿದೆ. ಈ ದಿಶೆಯಲ್ಲಿ ಸಂಶೋಧನೆ ನಡೆಸಿದ ವಿದ್ವಾಂಸರಲ್ಲೂ ಏಕಾಭಿಪ್ರಾಯವಿಲ್ಲ. ಡಾ. ಹಿರೇಮಲ್ಲೂರ ಈಶ್ವರನ್ ಅವರು ೧೦೭ ರಗಳೆಗಳು ಎಂದೂ ಶ್ರೀ ಎಚ್. ದೇವೀರಪ್ಪನವರು ೬೧ ರಗಳೆಗಳು ಎಂದೂ ಅಭಿಪ್ರಾಯಪಟ್ಟಿದ್ದಾರೆ. ಪ್ರಕೃತ ಗ್ರಂಥದಲ್ಲಿ ಸಂಪಾದಿಸಿರುವ ಸುರಗಿಯ ಚೌಡಯ್ಯ, ಮುಸುಟೆಯ ಚೌಡಯ್ಯ, ತೆಲುಗು ಜೊಮ್ಮಯ್ಯ, ಬಾಹೂರ ಬೊಮ್ಮಯ್ಯ ಮತ್ತು ಕೋವೂರು ಬೊಮ್ಮಯ್ಯ—ಈ ರಗಳೆಗಳು ಹರಿಹರ ಕೃತವೆಂದೇ ಈ ಇಬ್ಬರು ವಿದ್ವಾಂಸರೂ ಒಪ್ಪಿದ್ದಾರೆ.

ತಾವು ದೃಢವಾಗಿ ನಂಬಿರುವ ಧರ್ಮ ದೈವದ ಬಗೆಗೆ ಅತೀವ ನಿಷ್ಠೆಯನ್ನು ತಾಳಿ ಅದಕ್ಕಾಗಿ ಪ್ರಾಣಾರ್ಪಣ ಮಾಡಿಕೊಂಡವರು ಕಾವ್ಯ ಪುರಾಣಗಳಲ್ಲಿ ಕಂಡು ಬರುತ್ತಾರೆ. ಈ ಸಂಕಲನದಲ್ಲಿ ಚಿತ್ರಿಸಿರುವ ಐವರು ಶರಣರು ಅಂತಹವರೇ. ಆದುದರಿಂದ ಈ ರಗಳೆಗಳನ್ನೇ ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ. ಈಗ ಹೊರಬರುವ ಈ ಐದು ರಗಳೆಗಳಲ್ಲಿ ತೆಲುಗು ಜೊಮ್ಮಯ್ಯ ಮತ್ತು ಬಾಹೂರು ಬೊಮ್ಮಯ್ಯನ ರಗಳೆಗಳು ರಾವ್ ಬಹದ್ದೂರ್ ಡಾ. ಪಿ. ಜಿ. ಹಳಕಟ್ಟಿ ಅವರಿಂದ ಈ ಹಿಂದೆಯೇ ಪ್ರಕಟವಾಗಿವೆ. ಸುರಗಿಯ ಚೌಡಯ್ಯ, ಮುಸುಟೆಯ ಚೌಡಯ್ಯ ಮತ್ತು ಕೋವೂರು ಬೊಮ್ಮಯ್ಯ ಈ ಮೂರು ರಗಳೆಗಳು ಮೊದಲಬಾರಿಗೆ ಬೆಳಕು ಕಾಣುತ್ತಿವೆ.

ಹರಿಹರನ ಐದು ರಗಳೆಗಳ ಸಂಪಾದನ ಕಾರ್ಯವನ್ನು ಈ ವಿಭಾಗದ ಮುಖ್ಯಸ್ಥರಾಗಿದ್ದ ಶ್ರೀ ಎಚ್. ದೇವೀರಪ್ಪನವರು ಸಂಶೋಧಕ ಸಹಾಯಕಿಯಾಗಿದ್ದ ಶ್ರೀಮತಿ ಎಂ.ಎನ್. ಲೀಲಾವತಿ ಅವರಿಗೆ ವಹಿಸಿದ್ದರು. ಅದರಂತೆ ಅವರು ಮುದ್ರಣ ಪ್ರತಿಯನ್ನು ಸಿದ್ಧಪಡಿಸಿದ್ದರು. ಶ್ರೀಮತಿ ಲೀಲಾವತಿ ಅವರು ಈ ಸಂಸ್ಥೆಯಿಂದ ಬೇರೆ ಸಂಸ್ಥೆಗೆ ಹೋದ ಮೇಲೆ ಈ ಗ್ರಂಥದ ಕರಡಚ್ಚು ತಿದ್ದುವ ಕೆಲಸವನ್ನು ಸಂಪಾದನ ವಿಭಾಗದ ವಿದ್ವಾಂಸರು ನಿರ್ವಹಿಸಿದ್ದಾರೆ. ಸಂಪಾದನ ಕಾರ್ಯದಲ್ಲಿ ಸಂಶಯಗಳು ತಲೆದೋರಿದಾಗ ಮೂಲ ಮಾತೃಕೆಗಳೊಡನೆ ಪರಿಶೀಲಿಸುವಲ್ಲಿ ಪೀಠಿಕೆಗೆ ಮಾಹಿತಿಯನ್ನು ಒದಗಿಸುವಲ್ಲಿ ಈ ವಿಭಾಗದ ಸಂಶೋಧಕ ಸಹಾಯಕರಾದ ಶ್ರೀ ಜಿ. ಜಿ. ಮಂಜುನಾಥನ್ ಅವರು ಶ್ರದ್ಧೆಯಿಂದ ಸಂಪಾದಕಿಯರಿಗೆ ನೆರವಾಗಿದ್ದಾರೆ. ಈ ವಿಶಿಷ್ಟ ರಗಳೆಗಳನ್ನು ಕನ್ನಡ ಜನತೆ ಆದರದಿಂದ ಬರಮಾಡಿಕೊಳ್ಳುವರೆಂದು ನಂಬಲಾಗಿದೆ.

ಮೈಸೂರು
೧೬-೩-೧೯೭೩

ಎನ್. ಬಸವಾರಾಧ್ಯ

ವಿಷಯಸೂಚಿ

ಮುನ್ನುಡಿ		v
ವಿಭಾಗ ಸಂಪಾದಕರ ಮಾತು		ix
ಪೀಠಿಕೆ		xii
೧.	ಸುರಗಿಯ ಚೌಡಯ್ಯಗಳ ರಗಳೆ	೩
೨.	ಮುಸುಟೆಯ ಚೌಡಯ್ಯಗಳ ರಗಳೆ	೧೧
೩.	ತೆಲುಗು ಜೊಮ್ಮಯ್ಯಗಳ ರಗಳೆ	೨೨
೪.	ಬಾಹೂರು ಬೊಮ್ಮಯ್ಯಗಳ ರಗಳೆ	೪೫
೫.	ಕೋವೂರು ಬೊಮ್ಮಯ್ಯಗಳ ರಗಳೆ	೬೮

ಪೀಠಿಕೆ

I ಕವಿ ಕಾವ್ಯ ವಿಚಾರ

ಪಂಪಾವಿರೂಪಾಕ್ಷನ ಸಾಕ್ಷಾತ್ ಸುಪುತ್ರ ಹರಿಹರ ಭಕ್ತಕವಿ. ಈತ ವಸ್ತುವಿನ ಆಯ್ಕೆಯಿಂದ ಭಾಷಾಪ್ರಯೋಗದಿಂದ ಛಂದೋವೈಶಿಷ್ಟ್ಯದಿಂದ ಕನ್ನಡ ಸಾಹಿತ್ಯದ ಅದ್ವಿತೀಯ ಕ್ರಾಂತಿಕಾರಿ ಕವಿಯಾಗಿ ಹನ್ನೆರಡನೆಯ ಶತಮಾನದಲ್ಲಿ ಮೆರೆದನು. ಈತನ ಜೀವಿತದ ಬಗ್ಗೆ ಸಂಗತಿಗಳನ್ನು ಒದಗಿಸುವ ಆಕರಗಳೆಂದರೆ ರಾಘವಾಂಕ ಚಾರಿತ್ರ, ಪದ್ಮರಾಜ ಪುರಾಣ, ಚೆನ್ನಬಸವ ಪುರಾಣ, ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರ ಮೊದಲಾದ ಕೃತಿಗಳು. ಸಿದ್ಧನಂಜೇಶನ ರಾಘವಾಂಕ ಚಾರಿತ್ರದ ೨ ೩ಳನೆಯ ಪದ್ಯದಲ್ಲಿ ಬರುವ—

ಮಿಸುಪ ಜಡೆಮುಡಿಯಿಂದೆ ಪಟ್ಟಂಡಲದಿ ಶಿರದೊ
ಳೆಸೆವ ಲಿಂಗದಿ ಯಜ್ಞಸೂತ್ರದಿಂ ರುದ್ರಾಕ್ಷೆ
ವಿಸರಮಂ ತಳೆದವಯವಂಗಳಿಂ ಭಸಿತಾಂಗದಿಂದುಸಿರ್ವ ಶಿವಮಂತ್ರದಿಂ
ಒಸೆದು ಕೈಗ್ಗೆದಕ್ಷಮಾಲೆಯಿಂ ಥೋತ್ರ ಶೋ
ಭಿಸುವ ಪಾವುಗೆ ಕಮಂಡಲು ಕೊಡೆಗಳಿಂದೆ ರಂ
ಜಿಸುತೆರಡನೆಯ ಶಿವನು ಎಂಬಂತೆ ಹರೀಶ್ವರನಲ್ಲಿಗೈತಂದನು

ಎಂಬ ವರ್ಣನೆಯಿಂದ ಹರಿಹರನ ವ್ಯಕ್ತಿಚಿತ್ರ ಕಣ್ಣಿಗೆ ಕಟ್ಟುತ್ತದೆ.

ಹರಿಹರನ ತಾಯಿತಂದೆಯರ ಬಗ್ಗೆ ಖಚಿತವಾಗಿ ತಿಳಿದುಬಂದಿಲ್ಲ. ರಾಘವಾಂಕ ಚಾರಿತ್ರದ ಪ್ರಕಾರ ಶರ್ವಾಣಿ ಈತನ ತಾಯಿ, ಹಂಪೆಯ ಮಹಾದೇವ ತಂದೆ. ಹರಿಹರ ತನ್ನ ಗುರುಪರಂಪರೆಯನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಅದು ಹೀಗಿದೆ—

ಹಂಪೆಯ ಶಂಕರದೇವರ
ಹಂಪೆಯ ಗುರುಮಾದಿರಾಜನೆಸರ ಮತ್ತಾ
ಹಂಪೆಯ ಮಾದರಸರ ದಯೆ
ಯಿಂ ಪೊಗಳ್ದಂ ರಸಿಕಚಕ್ರಿ ಹರಿಹರದೇವಂ ॥ (ತಿರುನೀಲಕಂಠರ ರಗಳೆ)

ಹಂಪೆಯ ಮಾದರಸರ ಕಾರುಣ್ಯದ ಶಿಶುವಾದ ಹರಿಹರದೇವ ಮೊದಲು ಶೈವ ನಾಗಿದ್ದು ಅನಂತರ ಉಗ್ರವೀರಶೈವನಾದನು. ಆತನ ಶಿವನಿಷ್ಠೆ ಬಳ್ಳಿವಿಡಿದು "ಸ್ವಪ್ನ ದೊಳಾದಡಿನ್ನು ಶಂಕರನ ತತ್ಪದಪುರ ಪುರಾತನರನಲ್ಲದೆ ಇತರರ ಸ್ತುತಿಸಬೇಡ" ಎನ್ನುವ ನಿಲುವು ಇನ್ನೂ ಸ್ಪಷ್ಟವಾಗಿ ಪಂಪಾಶತಕದ—

ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ
ತನತನಗಿಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರನೆಂದು ತಾ
ನನವರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ
ನೆನೆ ಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ

ಎಂಬ ಪದ್ಯದಿಂದ ವ್ಯಕ್ತವಾಗಿದೆ.

ಹರಿಹರನ ಕಾಲದ ಬಗ್ಗೆ ವಿಪುಲವಾದ ಚರ್ಚೆ ನಡೆದಿದೆ. ವಿದ್ವಾಂಸರು ಭಿನ್ನ ಭಿನ್ನ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅವರಲ್ಲಿ ಕವಿಚರಿತೆಕಾರರು 1141-1173 ಎಂದೂ ಕಿಟ್ಟೆಲ್ ಅವರು ಸು. 1290 ಎಂದೂ ಡಾ. ಎ. ವೆಂಕಟಸುಬ್ಬಯ್ಯನವರು 1260-1270 ಎಂದೂ ಎಂ. ಗೋವಿಂದ ಪೈ ಅವರು ಸು. 1145-1220 ಎಂದೂ ಕೆ. ಜಿ. ಕುಂದಣಗಾರರು ಮತ್ತು ಸ. ಸ. ಮಾಳವಾಡರು 1216 ಎಂದೂ ಎಚ್. ದೇವೀರಪ್ಪನವರು ಮತ್ತು ದೇ. ಜವರೇಗೌಡರು 1220-1285 ಎಂದೂ ವಿವಿಧ ಆಧಾರಗಳಿಂದ ನಿರ್ಧರಿಸಿದ್ದಾರೆ. ಆದರೆ ಡಾ. ಡಿ.ಎಲ್. ನರಸಿಂಹಾಚಾರ್ಯರು ಸಿದ್ಧರಾಮ ಚಾರಿತ್ರದ ಮುನ್ನುಡಿಯಲ್ಲಿ ಹರಿಹರನು ಸು. 1145ರಲ್ಲಿ ರಚಿತವಾದ 'ಪೆರಿಯ ಪುರಾಣ' ದಿಂದ 'ಅರುವತ್ತು ಮೂರು ಪುರಾತನ'ರ ಕಥಾವಸ್ತುಗಳನ್ನು ತೆಗೆದುಕೊಂಡಿರುವನೆಂದು ಹೇಳಲು ಆಧಾರವಿರುವುದರಿಂದ ಅಲ್ಲಿಂದೀಚೆಗೆ, 'ಏಕಾಂತ ರಾಮಯ್ಯನ ರಗಳೆ' ಬರೆದಿರುವುದರಿಂದ ಸು. 1190ರಿಂದ ಈಚೆಗೂ, ಸೂಕ್ತಿಸುಧಾರ್ಣವ ಮತ್ತು ಶಬ್ದಮಣಿದರ್ಪಣಗಳಲ್ಲಿ ಗಿರಿಜಾಕಲ್ಯಾಣದ ಪದ್ಯಗಳು ದೊರೆತಿರುವುದರಿಂದ ಸು. 1245ಕ್ಕೆ ಮೊದಲೂ ಒಟ್ಟಿನಲ್ಲಿ "ಹರಿಹರನು ಒಂದನೆಯ ನರಸಿಂಹನ ಆಳಿಕೆಯಲ್ಲಿಯೋ ಅವನ ಮಗನಾದ ಎರಡನೆಯ ವೀರಬಲ್ಲಾಳನಲ್ಲಿಯೋ (1173-1220) ಕೆಲವು ವರ್ಷ ಕರಣಿಕನಾಗಿದ್ದು ಹಂಪೆಗೆ ಬಂದು ಅಲ್ಲಿ ನೆಲೆಸಿ 1200ರ ಸುಮಾರಿಗೆ ಪಂಪಾಶತಕ, ಗಿರಿಜಾಕಲ್ಯಾಣಗಳನ್ನು ರಚಿಸಿ ಆಮೇಲೆ ರಗಳೆಗಳನ್ನು ಬರೆದು ಎರಡನೆಯ ನರಸಿಂಹನ ಆಳಿಕೆಯ ಪ್ರಾರಂಭದಲ್ಲಿ ಎಂದರೆ 1225ರಲ್ಲಿ ವಿರೂಪಾಕ್ಷನಲ್ಲಿ ಐಕ್ಯವಾದಂತೆ ಊಹಿಸಬಹುದು" ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಮಾತು ಬಹುಸಮ್ಮತವಾಗಿದೆ.

ಗಿರಿಜಾಕಲ್ಯಾಣ, ರಕ್ಷಾಶತಕ, ಪಂಪಾಶತಕ, ಮುಡಿಗೆಯ ಅಷ್ಟಕ ಮತ್ತು ನೂರಾರು ರಗಳೆಗಳು ಹರಿಹರನ ಕೃತಿಗಳಾಗಿವೆ. ಗಿರಿಜಾಕಲ್ಯಾಣವು ಒಂದು ಚಂಪೂ ಕಾವ್ಯ. ಹರಿಹರನೇ "ಗಿರಿಜಾಕಲ್ಯಾಣಮಿಂತೀ ನುತಕೃತಿಯ ಪೆಸರ್ ಭಾಪುರೇ ಕಾವ್ಯನಾಥಂ ಗಿರಿಜಾನಾಥಂ ಕಥಾಸಂಗತಿ ವರಗಿರಿಜೋದ್ವಾಹವೀ ಕಾವ್ಯಮಂ ವಿಸ್ತರದಿಂ ತಾನೊಲ್ದು ಪೇಳ್ದಂ ಶಿವಕವಿ ಹರಿದೇವಂ ಮಹೋತ್ಸಾಹದಿಂದಂ" ಎಂದು ಹೇಳಿದ್ದಾನೆ. ಪಂಪಾ ವಿರೂಪಾಕ್ಷನ ಸ್ತುತಿ ಮತ್ತು ಭಕ್ತಿ ವೈರಾಗ್ಯಗಳು ಕ್ರಮವಾಗಿ ಪಂಪಾಶತಕ ಮತ್ತು ರಕ್ಷಾಶತಕಗಳ ವಸ್ತು. ಮುಡಿಗೆಯ ಅಷ್ಟಕವು ಕ್ಷಕಾರ ಪ್ರಾಸದ ೮ ಪದ್ಯಗಳಲ್ಲಿ ಹರಿಹರನ ಶಿವೈಕನಿಷ್ಠೆ ಮತ್ತು ಪವಾಡವೊಂದನ್ನು ಚಿತ್ರಿಸುವ ಕೃತಿ.

ಕನ್ನಡ ಸಾಹಿತ್ಯದಲ್ಲಿ ಹರಿಹರನ ಹೆಸರು ಚಿರಸ್ಥಾಯಿಯಾಗಿರುವುದು ಆತನ ರಗಳೆಗಳಿಂದ. ಆತನು ಬರೆದ ರಗಳೆಗಳ ಸಂಖ್ಯಾನಿರ್ಣಯವೇ ಒಂದು ಸಾಹಸದ ಮಾತಾಗಿದೆ. ರಗಳೆಯನ್ನು ಮೊಟ್ಟಮೊದಲು ಕಥನಕವನಕ್ಕೆ, ಕೃತಿರಚನೆಗೆ ಬಳಸಿಕೊಂಡ ಕೀರ್ತಿ ಇವನದು. ಕನ್ನಡ ಸಾಹಿತ್ಯದಲ್ಲಿ ರಗಳೆಯ ಜೊತೆಗೆ ಗದ್ಯಕ್ಕೂ ಒಂದು ಸ್ಥಿರವಾದ

ಸ್ಥಾನವನ್ನು ಕಲ್ಪಿಸಿದ್ದಾನೆ. ಈತನ ರಗಳೆಯ ಸಾಹಿತ್ಯವನ್ನು ಸ್ಥೂಲವಾಗಿ ಮೂರು ವಿಭಾಗ ಮಾಡಬಹುದು. ಅವು ಪುರಾತನರು, ನೂತನರು ಮತ್ತು ಇತರ. ಬಸವರಾಜ ದೇವರ ರಗಳೆ, ನಂಬಿಯಣ್ಣನ ರಗಳೆ, ಮಹಾದೇವಿಯಕ್ಕನ ರಗಳೆ, ಮಲುಹಣನ ರಗಳೆ ಹೀಗೆ ನೂರಾರು ಶಿವಶರಣರ ರಗಳೆಗಳನ್ನು ಬರೆದು ಈತನು ಕನ್ನಡ ಸಾಹಿತ್ಯದ 'ಜೀವನ ಚರಿತ್ರೆ' ವಿಭಾಗಕ್ಕೆ ಮಹೋಪಕಾರ ಮಾಡಿದ್ದಾನೆ. ಇವನ ಕಾವ್ಯಕಥಾನಾಯಕರಲ್ಲಿ ಕರ್ಣಾಟಕ, ತಮಿಳುನಾಡು, ಆಂಧ್ರಪ್ರದೇಶ, ಗುಜರಾತು, ಬಂಗಾಳ, ಕಾಶ್ಮೀರ ಹೀಗೆ ಅಖಂಡ ಭಾರತದ ಶಿವಶರಣರಿದ್ದಾರೆ.

ಪ್ರಕೃತಸಂಕಲನದಲ್ಲಿ ಕರ್ಣಾಟಕದ ಸುರಗಿಯ ಚೌಡಯ್ಯ, ಮುಸುಟೆಯ ಚೌಡಯ್ಯ, ಬಾಹೂರ ಬೊಮ್ಮಯ್ಯ, ಕೋವೂರ ಬೊಮ್ಮಯ್ಯ ಮತ್ತು ತೆಲುಗು ಜೊಮ್ಮಯ್ಯನ ಜೀವಿತವನ್ನು ದರ್ಶಿಸುತ್ತೇವೆ. ಈ ವ್ಯಕ್ತಿಗಳ ಜೀವನ ಚರಿತೆಗೆ ಹರಿಹರ ನಿಗೆ ದೊರೆತ ಆಧಾರ ಏನು ಎಂಬುದು ತಿಳಿದು ಬಂದಿಲ್ಲ. ಬಹುಶಃ ಅಂದಿನ ಜನತೆ ಯಲ್ಲಿದ್ದ ದಂತಕಥೆ ಪವಾಡಗಳು ಇವನ ಆಕರವಾಗಿರಬಹುದು. ಇಲ್ಲಿನ ನಾಯಕರೆಲ್ಲರೂ ತಾವು ಕೈಕೊಂಡ ನೇಮ, ಶಿವೈಕನಿಷ್ಠೆ ಮತ್ತು ಸ್ವಧರ್ಮೋತ್ಕರ್ಷಕ್ಕಾಗಿ ಎಂಥ ಸಾಹಸದ ಕೆಲಸವನ್ನು ಮಾಡಿದ್ದಾರೆ! ಈ ರಗಳೆಗಳಲ್ಲಿ ನಾವು ಕಾಣುವ ಅನ್ಯಮತದ್ವೇಷ ಅಂದಿನ ಸಮಾಜದ ವಸ್ತುನಿಷ್ಠ ಚಿತ್ರಣ ಮಾತ್ರ. ಈ ರಗಳೆಗಳನ್ನು ಓದಿ ಹರಿಹರ ಮತೀಯ ಕವಿ ಎನ್ನುವ ತೀರ್ಮಾನಕ್ಕೆ ಬಂದರೆ ಅದು ಅವನಿಗೆ ಎಸಗಬಹುದಾದ ಘೋರ ಅಪಚಾರ. ಬಸವರಾಜದೇವರ ರಗಳೆ, ನಂಬಿಯಣ್ಣನ ರಗಳೆ, ಮಲುಹಣನ ರಗಳೆಗಳನ್ನು ಓದಿದಾಗ, ಏಕಾಂತ ರಾಮಯ್ಯನ ರಗಳೆಯನ್ನು ಅಬ್ಬಲೂರು ಶಾಸನದೊಂದಿಗೆ ಅಭ್ಯಾಸ ಮಾಡಿದಾಗ ಆತ ಪಾತ್ರಚಿತ್ರಣದಲ್ಲಿ ಘಟನಾನಿರೂಪಣೆಯಲ್ಲಿ ಎಷ್ಟು ವಸ್ತುನಿಷ್ಠನಾಗಿದ್ದಾನೆ ಎನ್ನುವ ಅರಿವು ಮೂಡುತ್ತದೆ. ಒಂದು ಧರ್ಮ ಪ್ರಬಲವಾಗಿದ್ದ ಅದೇ ಸಮಯದಲ್ಲಿ ಮತ್ತೊಂದು ಧರ್ಮ ಪ್ರವರ್ಧಮಾನಕ್ಕೆ ಬರುವಾಗ ಅನ್ಯಮತದ್ವೇಷ ಮೊದಲಾದ ಸಂಗತಿಗಳು ಅಸಹಜವೂ ಅಲ್ಲ, ಅಪರೂಪವೂ ಅಲ್ಲ. ಈ ಹಿನ್ನೆಲೆಯಲ್ಲಿ ಪ್ರಕೃತಸಂಕಲನದ ರಗಳೆಗಳನ್ನು ನೋಡುವುದು ಸೂಕ್ತ.

II ಕಥಾಸಾರ

೧ ಸುರಗಿಯ ಚೌಡಯ್ಯ *

ಉತ್ತರದಿಕ್ಕಿನ ಶಿವಪುರದಲ್ಲಿ ಚೌಡಯ್ಯನೆಂಬ ಶಿವಭಕ್ತನಿದ್ದನು. ಅವನು ಅನನ್ಯ ಭಕ್ತಿಯಿಂದ ಶಿವನನ್ನು ಆರಾಧಿಸುತ್ತಿದ್ದನು. ಹೀಗಿರುವಲ್ಲಿ ಒಮ್ಮೆ ಚೌಡಯ್ಯನು ಶುದ್ಧಾಂಗನಾಗಿ ಅಗ್ಘವಣಿ ಹೂವುಗಳನ್ನು ತೆಗೆದುಕೊಂಡು ಶಿವನನ್ನು ಕಾಣುವ ತವಕದಿಂದ ದೇವಾಲಯವನ್ನು ಪ್ರವೇಶಿಸಿದನು. ಆಗ ದೇವಾಲಯದಲ್ಲಿ ಜನಸಂದಣಿ ದಟ್ಟವಾಗಿದ್ದು ಚೌಡಯ್ಯನಿಗೆ ಶಿವನನ್ನು ಕಾಣಲಾಗಲಿಲ್ಲ. ಇದರಿಂದ ಮನನೊಂದ ಚೌಡಯ್ಯನು 'ಹರಹರ ನಮಶ್ಶಿವಾಯ' ಎನ್ನುತ್ತ ಶಿವನನ್ನು ಕಾಣುವ ಹಂಬಲದಿಂದ ಮಧ್ಯಾಹ್ನದವರೆಗೂ ಅಲ್ಲಿಯೇ ಕಾಯುತ್ತಿದ್ದನು. ಜನಸಂದಣಿ ಕರಗಿದ ಮೇಲೆ ಶಿವನ ಮುಂದೆ ನಿಂತು ನಾನಾ ಪರಿಯಿಂದ ಸ್ತುತಿಸಿ ಶಿವನನ್ನು ನೋಡದೆ ತಾನು ಬದುಕುವುದು ಸಾಧ್ಯವೇ ಇಲ್ಲವೆಂದು ಶಿವನಿಗೆ ಬಿನ್ನೈಸಿಕೊಂಡನು. ಅಲ್ಲದೆ ತಾನು 'ಶಿವನನ್ನು ನೋಡುವ ನೋಟಕ್ಕೆ ಅಡ್ಡ ಬಂದವರನ್ನು ಅಲಗಿನಿಂದ ಕತ್ತರಿಸುವೆನು' ಎಂಬ ಪ್ರತಿಜ್ಞೆಯನ್ನು ಮಾಡಿ ಆ ನಿಯಮವನ್ನು ಪರಿಪಾಲಿಸಿಕೊಂಡು ಬರುತ್ತಿದ್ದನು.

ಒಂದು ದಿನ ಶಿವನು ಚೌಡಯ್ಯನ ಕನಸಿನಲ್ಲಿ ಬಂದು 'ಹಸಿದೆನೆಲೆ ಮಗನೆ ಹಸಿದೆಂ ಕಂದ' ಎಂದು ಹೇಳಿದನು. ಮರುದಿನ ಚೌಡಯ್ಯನು ನಾಗಕುಂಡಲನಿಗಾಗಿ ಓಗರ, ಮೇಲೋಗರ, ದಿವ್ಯಾನ್ನ, ಅಮೃತಾನ್ನಗಳನ್ನು ಸಿದ್ಧಮಾಡಿಸಿ ದೇವಾಲಯಕ್ಕೆ ಬಂದು ಶಿವನ ಮುಂದಿಟ್ಟು ಆರೋಗಿಸಬೇಕೆಂದು ಪರಿಪರಿಯಾಗಿ ಬೇಡಿಕೊಂಡನು. ಆದರೆ ಚೌಡಯ್ಯನ ಇಚ್ಛೆಯಂತೆ ಶಿವನು ಆರೋಗಿಸದಿರುವುದನ್ನು ಕಂಡ ಆತನು ಕತ್ತಿಯನ್ನು ಹಿರಿದು ಕತ್ತನ್ನು ಕತ್ತರಿಸಿಕೊಳ್ಳಲು ಸಿದ್ಧನಾದನು. ಕತ್ತಿಯು ಕತ್ತನ್ನು ಸಂಧಿಸುವಷ್ಟರಲ್ಲಿಯೇ ಶಿವಲಿಂಗ ದಿಂದ ಒಂದು ಹಸ್ತ ಮೂಡಿಬಂದು ಮುಂದಿದ್ದ ಆಹಾರವನ್ನು ತೆಗೆದುಕೊಂಡು ಪಂಚವದನ ಗಳಿಗೂ ನೀಡಿತು. ಇದನ್ನು ನೋಡಿದ ಚೌಡಯ್ಯನು ಆನಂದತುಂದಿಲನಾದನು. ಹೀಗೆ ಸುರಗಿಯ ಚೌಡಯ್ಯ ಶಿವನಿಗೆ ಆರೋಗಣೆಯನ್ನು ನಡೆಸುತ್ತ ಶಿವಭಕ್ತರಿಗೆ ಬೇಡಿದ್ದನ್ನಿತ್ತು ತಣಿಸುತ್ತಿದ್ದನು.

---

* ತುತ್ತುಗಳನಳವಡಿಸಿ ನೀಡಲು
ತುತ್ತು ತುತ್ತಿಗೆ ಶಂಭು ನೀಡಿಕೊ
ಳುತ್ತವಾರೋಗಿಸಿ ಸುರಗಿಚವುಡಯ್ಯನಂ ಮೆಱೆದ॥

(ಬಸವ ಪುರಾಣ ಸಂಧಿ ೩೩–ಸೂಚನೆ)

ಇವನು ವಚನಗಳನ್ನು ಬರೆದಿದ್ದಾನೆಯೋ ಇಲ್ಲವೋ ಗೊತ್ತಿಲ್ಲ. ಮರುಳುಶಂಕರ ದೇವನು "ಘನಮಹಾತ್ಮರು ಸುರಗಿಯ ಚೌಡಯ್ಯ ತಂದೆಗಳು ಬಲ್ಲ, ನಾನೆತ್ತ ಬಲ್ಲೆನಯ್ಯ" ಎಂದು ಮುಗಿಯುವ ವಚನದಲ್ಲಿ ಇವನ ಹೆಸರನ್ನು ಹೇಳಿದ್ದಾನೆ.

(ಕವಿಚರಿತ್ರೆ (1972) ಅನುಬಂಧ II ಪುಟ–96)

ಒಂದು ದಿನ ಚೌಡಯ್ಯನು ನಸುಕಿನಲ್ಲೆ ಎದ್ದು ಮಿಂದು ಶುಚಿರ್ಭೂತನಾಗಿ ದೇವಾಲಯವನ್ನು ಪ್ರವೇಶಿಸಿದನು. ಅಷ್ಟರಲ್ಲಿ ಇವನ ನೇಮವನ್ನು ಅರಿಯದ ಹೊಸಬರಿಬ್ಬರು ಶಿವನಿಗೆ ಅಡ್ಡವಾಗಿ ನಿಂತಿದ್ದರು. ಇದನ್ನು ನೋಡಿದ ಆತನು ತನ್ನ ಕತ್ತಿಯಿಂದ ಇಬ್ಬರನ್ನು ಕತ್ತರಿಸಿ ಹಾಕಿ ಶಿವನನ್ನು ಪರಿಪರಿಯಾಗಿ ಸ್ತುತಿಸುತ್ತಾ ನಿಂತನು. ಅದನ್ನು ಕಂಡ ಪುರ ಜನರು ದೇವಾಲಯದ ಮುಂದೆ ನೆರೆದು ನಾನಾ ರೀತಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು ಚೌಡಯ್ಯನು ತನ್ನ ಪೂಜೆಯನ್ನು ಮುಗಿಸಿಕೊಂಡು ಹೊರಬರುವಾಗ ಸತ್ತುಬಿದ್ದಿದ್ದ ಶಿವ ಭಕ್ತರನ್ನು ನೋಡಿ 'ಏಳೇಳು' ಎನ್ನಲು ಇಬ್ಬರೂ ಎದ್ದುನಿಂತು ಕೈಮುಗಿದರು. ಈ ಪವಾಡವನ್ನು ನೋಡಿದ ಜನ ಆಶ್ಚರ್ಯಗೊಂಡರು. ಅಷ್ಟರಲ್ಲಿ ಪುಷ್ಪವೃಷ್ಟಿಯಾಗಿ ದೇವ ದುಂದುಭಿನೊಳಗಿತು. ಪುಷ್ಪಕ ವಿಮಾನ ಬಂದು ಚೌಡಯ್ಯನನ್ನು ಆ ಭಕ್ತರಿಬ್ಬರ ಸಮೇತ ಕೈಲಾಸಕ್ಕೆ ಕೊಂಡೊಯ್ದಿತು. ಶಿವನು ಹರಭಕ್ತರಿಬ್ಬರಿಗೂ ಸಾಲೋಕ್ಯಪದವಿಯನ್ನೂ ಚೌಡಯ್ಯನಿಗೆ ಗಣಪದವಿಯನ್ನೂ ಕೊಟ್ಟು ಸತ್ಕರಿಸಿದನು.

೨ ಮುಸುಟಿಯ ಚೌಡಯ್ಯ *

ಮುಸುಟಿ ಎಂಬ ಗ್ರಾಮದಲ್ಲಿ ಚೌಡಯ್ಯನೆಂಬ ಶಿವಶರಣನಿದ್ದನು. ಅವನು ಸದಾಚಾರಸಂಪನ್ನನಾಗಿ ನಿತ್ಯನೇಮಗಳನ್ನು ನಿಷ್ಠೆಯಿಂದ ಪಾಲಿಸುತ್ತಿದ್ದನು. ಆತನಿಗೆ ಕನಸು ಮನಸಿನಲ್ಲಿ ನೆನಹು ನಿಷ್ಠೆಯಲ್ಲಿ ನಡೆವಲ್ಲಿ ನುಡಿವಲ್ಲಿ ಕೊಡುವಲ್ಲಿ ಕೊಂಬಲ್ಲಿ 'ಶರಣು ಶರಣಾರ್ಥಿ' ಎಂಬುದೇ ನೇಮವಾಗಿದ್ದಿತು.

ಒಂದು ದಿನ ಆತನು ಶಿವನ ಮಜ್ಜನಕ್ಕೆ ಅಗ್ಘವಣಿಯನ್ನು ತೆಗೆದುಕೊಂಡು ಹೋಗುತ್ತಿರುವಾಗ ದಾರಿಯಲ್ಲಿ ಭಕ್ತರು ಒಬ್ಬ ಭಕ್ತನನ್ನು ವಿಮಾನದಲ್ಲಿರಿಸಿಕೊಂಡು ರುದ್ರ ಭೂಮಿಗೆ ಒಯ್ಯುತ್ತಿದ್ದುದನ್ನು ನೋಡಿದನು. ಕೂಡಲೆ ಆತನು 'ಶರಣಾರ್ಥಿ' ಎಂದು ಹೇಳಿ ಆ ಶಿವಭಕ್ತನನ್ನು ಇಳಿಸಬೇಕೆಂದೂ ಇಲ್ಲದಿದ್ದರೆ ತಾನು ಅಳಿಯುವೆನೆಂದೂ ಹೇಳಿ ಕತ್ತಿಯನ್ನು ಹಿರಿದನು. ಆಗ ಆ ಶಿವಭಕ್ತನನ್ನು ಕಟ್ಟಿದ ಕಟ್ಟುಗಳೆಲ್ಲವೂ ಚಿಟಿಚಿಟಿಲ್ಲೆನ್ನುತ್ತ ಹರಿದುಹೋಗಿ ಆತನು ವಿಮಾನದಿಂದ ಇಳಿದು ಬಂದನು; ಅಂದಿನಿಂದ ಸತ್ತ ಜಂಗಮರನ್ನು ಒಲಿದು ಎತ್ತುವುದನ್ನೇ ನೇಮವಾಗಿ ಕೈಕೊಂಡನು.

---

* ಅಸುಗಳೆದ ತಾಪಸಗೆ ಗೂಳಿಗೆ
ಬಿಸಜನಯನೆಗೆ ಕೃತಕರೂಪಿಂ
ಗೊಸೆದು ಜೀವವನಿತ್ತು ಮೆಱೆದನು ಮುಸುಟಿ ಚೌಡಯ್ಯ
(ಬಸವಪುರಾಣ ಸಂಧಿ ೪೨–ಸೂಚನೆ)

ಇವನು ವಚನಗಳನ್ನು ಬರೆದಿದ್ದಾನೆಯೋ ಇಲ್ಲವೋ ತಿಳಿಯದು (ಕವಿಚರಿತ್ರೆ (1972) ಅನುಬಂಧ II ಪುಟ—96)

ಮತ್ತೊಂದು ದಿನ ಚೌಡಯ್ಯನು ಅಗ್ಘವಣಿ ಹೂಗಳನ್ನು ತರುತ್ತಿರಲು ಸತ್ತ ವೃಷಭ ವೊಂದನ್ನು ದಾರಿಯಲ್ಲಿ ಕಂಡನು. 'ಬಸವನ ಶರೀರಕ್ಕೆ ನೋವುಂಟೆ ಸಾವುಂಟೆ' ಎಂದು ಭಾವಿಸಿ 'ಬಸವಯ್ಯ, ಬಸವೇಶ್ವರ ಏಳು' ಎಂದಾಕ್ಷಣವೇ ಅದು ಮುರಿದೆದ್ದು ಬಂದಿತು. ಮತ್ತೊಂದು ದಿನ ಹುಡುಗರು ಆಟವಾಡುತ್ತಿದ್ದಾಗ 'ಅಲ್ಲಿ ಗೂಳಿಯ ಕಲ್ಲಿದೆಮಗೆ ನೆಜಿತ ಗೊತ್ತೆಂದು' ಮಾತಾಡುತ್ತಿದ್ದುದನ್ನು ಕೇಳಿ ಅವರಿಂದ ನಿಜವಾದ ಬಸವವೊಂದನ್ನು ಅಲ್ಲಿ ನಿಕ್ಷೇಪಿಸಿದ ಅನಂತರ ಅದು ಗೂಳಿಯ ಕಲ್ಲಾಯಿತೆಂದು ತಿಳಿದು 'ಆ ಬಸವನನ್ನು ಮತ್ತೆ ಬದುಕಿಸುವೆನು, ಇಲ್ಲದಿದ್ದಲ್ಲಿ ಮಡಿಯುವೆನು' ಎಂದು ಹೇಳಿ ಕಲ್ಲಿನ ಬಳಿಗೆ ಬಂದು ಶಿವ ನನ್ನು ಪ್ರಾರ್ಥಿಸಿ ಸುರಗಿಯನ್ನು ಹಿರಿದು 'ಎಲೆಲೆಲೆಲೆ ಬಸವ ಪೂಜಿಮಡು ಪೂಜಿಮಡೆ ನ್ನಾಣೆ, ಎಲೆಲೆ ಇನ್ನಿರ್ದಡೆ ಮಹೇಶ್ವರರ ಹಿರಿಯಾಣೆ' ಎಂದನು. ಕೂಡಲೆ ಭೂಮಿಯ ಒಳಗಿನಿಂದ ಬ್ರಹ್ಮಾಂಡವೇ ಅಲುಗಾಡಿದಂತಹ ಶಬ್ದ ಉಂಟಾಯಿತು. ಭರ್ಗವಾಹನದ ತುದಿಗೋಡು ಕಾಣಬಂದು ಬಸವ ಭೂಮಿಯನ್ನು ಒಡೆದು ಹೊರಬಂದಿತು. ಇದರಿಂದ ಸಂತಸಗೊಂಡ ಚೌಡಯ್ಯನು ಬಸವನನ್ನು ನಾನಾ ರೀತಿಯಲ್ಲಿ ಹಾಡಿ ಹೊಗಳಿದನು.

ಮುಸುಟೆಯ ಚೌಡಯ್ಯನು ಒಂದು ದಿನ ಬಸವ ಮತ್ತು ಭಕ್ತರೊಡಗೂಡಿ ಬರು ತ್ತಿರಲು ಫಲಭಾರದಿಂದ ಜಗ್ಗಿದ್ದ ಇಟ್ಟೆಯ ಮರವನ್ನು ಕಂಡರು. ಹಾಗೆ ಕಂಡ ಭಕ್ತರು ಆ ಇಟ್ಟೆಯ ಹಣ್ಣುಗಳು ಶಿವನ ಆರೋಗಣೆಗೆ ಬೇಕೆಂದು ಚೌಡಯನನ್ನು ಕೇಳಿದರು. ನಿಜವಾಗಿ ಆ ಹಣ್ಣುಗಳು ವಿಷದಿಂದ ಕೂಡಿದ್ದುವು. ಚೌಡಯ್ಯನು ತನ್ನ ಸುರಗಿಯನ್ನು ಆ ಮರಕ್ಕೆ ಸೋಕಿಸುತ್ತಿದ್ದಂತೆಯೆ ಅವೆಲ್ಲವೂ ಅಮೃತಮಯ ಫಲಗಳಾದುವು. ಚೌಡಯ್ಯ ಶರಣರ ಜೊತೆಯಲ್ಲಿ ಒಮ್ಮೆ ಹೋಗುತ್ತಿದ್ದಾಗ ದಾರಿಯಲ್ಲಿ ಒಂದು ದೊಡ್ಡ ನದಿ ಅಡ್ಡ ಸಿಕ್ಕಿತು. ಚೌಡಯ್ಯ 'ಎಲೆ ಜಲಧಿ ನಿಲ್ಲೆಂದು' ಸುರಗಿಯನ್ನು ಝಳಪಿಸಲು ಅದು ಎರಡು ಭಾಗವಾಯಿತು. ಆ ನದಿಯಲ್ಲಿ ಏಳು ದಿನಗಳನ್ನು ಕಳೆದು ಮುಂದೆ ಹೋದರು.

ಒಮ್ಮೆ ಜೈನರೆಲ್ಲರೂ ಸೇರಿ ಚೌಡಯ್ಯನ ನಿಷ್ಠೆಯನ್ನು ಪರೀಕ್ಷಿಸಲೋಸುಗ ಒಂದು ಗೋಣಿಯ ಚೀಲವನ್ನು ಪುರುಷನ ಆಕಾರದಲ್ಲಿ ಹೊಲೆದು ಅದಕ್ಕೆ ಜಂಗಮ ವೇಷವನ್ನು ತೊಡಿಸಿ ವಿಮಾನದಲ್ಲಿರಿಸಿ ಊರ ಹೊರಗಿನ ಪಾಳುದೇಗುಲದಲ್ಲಿಟ್ಟು 'ಸತ್ತು ನಾರುತ್ತಿರು ವವನನ್ನು ಎತ್ತುವವರು ಯಾರೂ ಇಲ್ಲ ಚೌಡಯ್ಯನ ಕೇರಿಗೆ ತೆಗೆದುಕೊಂಡು ಹೋಗಿ' ಎಂದು ಕೂಗಾಡುತ್ತಿದ್ದರು. ಅದನ್ನು ಕೇಳಿದ ಚೌಡಯ್ಯನಿಗೆ ಪರಸಮಯಿಗಳ ಕುಹಕ ಅರ್ಥವಾಗಿ ಈ ವೇಷವನ್ನೇ ನಿಜವಾಗಿಸುವೆನೆಂದು ಶಂಕರನನ್ನು ಧ್ಯಾನಿಸಿ ಆ ಚೀಲವ ಆಕಾರದಲ್ಲಿದ್ದ ಶರಣನನ್ನು ನುಡಿಸಿದನು. ಆ ಶರಣ ರೂಪಿಗೆ ಚೈತನ್ಯ ಬಂದಿತು. ನಭದಿಂದ ಪುಷ್ಪವೃಷ್ಟಿಯಾಯಿತು. ಚೌಡಯ್ಯನು ತನಗಾಗಿ ಬಂದ ವಿಮಾನದಲ್ಲಿ ಕುಳಿತು ಕೈಲಾಸಕ್ಕೆ ತೆರಳಿ ಗಣಪದವಿಯನ್ನು ಪಡೆದನು.

೩ ತೆಲುಗು ಜೊಮ್ಮಯ್ಯ*

ಕಲ್ಯಾಣಪಟ್ಟಣದಲ್ಲಿ ಜೊಮ್ಮಯ್ಯನೆಂಬ ಒಬ್ಬ ಶಿವಭಕ್ತನಿದ್ದನು. ಅವನು ಭೀಮನಾಥನ ಆರಾಧಕನಾಗಿದ್ದನು. ಒಂದು ದಿನ ಭೀಮನಾಥನು ಅವನ ಕನಸಿನಲ್ಲಿ ಬಂದು ಆ ಪಟ್ಟಣಕ್ಕೆ ಹತ್ತು ಯೋಜನ ದೂರದಲ್ಲಿರುವ ಕಾಡಿನಲ್ಲಿ ಕಾರಣಿಕ ಋಷಿಗಳು ಶಾಪಹತರಾಗಿ ಮೃಗರೂಪದಿಂದಿರುವರೆಂದೂ ನೀನು ಆ ಮೃಗಗಳನ್ನು ಬೇಟೆಯಾಡುವುದರ ಮೂಲಕ ಅವರಿಗೆ ಮೋಕ್ಷವನ್ನು ಒದಗಿಸಬೇಕೆಂದೂ ಹೇಳಿದನು. ಅದೇ ಮೇರೆಗೆ ಜೊಮ್ಮಯ್ಯ ಪ್ರತಿದಿನ ಬೇಟೆಯಾಡುತ್ತಿದ್ದು ಋಷಿಯರ ಕರ್ಮವನ್ನು ತೀರಿಸುತ್ತಿದ್ದನು. ಭಕ್ತರ ಸೇವಾರ್ಥವಾಗಿ ಪೆರ್ಮಾಡಿರಾಯನಲ್ಲಿ ಒಂದು ಸಾವಿರಹೊನ್ನಗಳ ವೃತ್ತಿಯನ್ನು ಕೈಕೊಂಡನು. ಹೀಗೆ ಜೋಳವಾಳಿಯಲ್ಲಿ ಧರಾನಾಥನಿಗೂ ವೇಳೆವಾಳಿಯಲ್ಲಿ ಭೀಮನಾಥನಿಗೂ ಸೇವೆಯನ್ನು ಸಲ್ಲಿಸುತ್ತಿದ್ದನು. ಆದರೆ ಪೆರ್ಮಾಡಿರಾಯನಿಗೆ ನಮಸ್ಕರಿಸುತ್ತಿರಲಿಲ್ಲ, ಆತನನ್ನು ಲೆಕ್ಕಿಸುತ್ತಿರಲಿಲ್ಲ. ಜೊಮ್ಮಯ್ಯನ ಕೀರ್ತಿ ಪೆರ್ಮಾಡಿರಾಯನ ಅರಸಿ ಲಕುಮಾದೇವಿಯ ಕಿವಿಯನ್ನು ಮುಟ್ಟಿತು. ಶಿವಭಕ್ತೆಯಾದ ಅವಳು ಅವನ ಏಕನಿಷ್ಠೆಯನ್ನರಿತು ಅವನಿಗೆ ಪೂಜಾಸಾಮಗ್ರಿಗಳನ್ನು ಒದಗಿಸುತ್ತಿದ್ದಳು. ಇವೆಲ್ಲವುಗಳಿಂದ ಜೊಮ್ಮಯ್ಯ ಶಿವನನ್ನು ಪರಿಪರಿಯಾಗಿ ಪೂಜಿಸುತ್ತಿದನು.

ಒಂದು ದಿನ ಜೊಮ್ಮಯ್ಯ ಶಿವನನ್ನು ನಾನಾ ರೀತಿಯಲ್ಲಿ ಪೂಜಿಸಿ ಅರಮನೆಗೆ ಬಂದನು. ಅಲ್ಲಿ ಅರಸನು ಒಂದು ಕಡೆ ವಿಷ್ಣುಪೂಜೆಯನ್ನು ಮಾಡುತ್ತಿದ್ದನು. ಜೊಮ್ಮಯ್ಯ ಹೊರಗೆ ನಿಂತಿದ್ದನು. ಆಗ ಮತ್ತೊಂದು ಕಡೆ ಒಬ್ಬ ಪುರಾಣಿಕ ಪಂಚಮುಖನ ನಿಂದೆಯನ್ನು ಮಾಡುತ್ತ ಕಟ್ಟುಕ ಪುರಾಣವನ್ನು ಓದಿ ಹೇಳುತ್ತಿದ್ದನು. ಇದನ್ನು ಕೇಳಿದ ಜೊಮ್ಮಣ್ಣನು ಕೋಪಗೊಂಡು ಆ ಶಿವದ್ರೋಹಿಯನ್ನು ಇರಿದು ಕೊಂದುಬಿಟ್ಟನು. ಶಿವನಿಂದೆಯನ್ನು ಕೇಳಿದ್ದಕ್ಕಾಗಿ ಪರಿತಪಿಸುತ್ತ ತನ್ನ ಮನೆಗೆ ಹೋದನು.

---

* ಮರಮೃಗಾಕೃತಿಗಳಿನಡವಿಯೊಳು
ಚರಿಸುವಾ ಗಂಧರ್ವರಂ ಸಂ
ಹರಿಸಿ ಶಿವಲೋಕಕ್ಕೆ ಕಳುಹಿದನು ತೆಲುಗು ಜೊಮ್ಮಯ್ಯಂ

(ಬಸವ ಪುರಾಣ ಸಂಧಿ ೩೪—ಸೂಚನೆ.)

ತೆಲುಗು ಜೊಮ್ಮಯ್ಯ—ಸು. 1160 : ಈತನ ಅಂಕಿತವು 'ತೆಲುಗೇಶ್ವರ' ಎಂದಿರುವಂತೆ ತೋರುತ್ತದೆ. ವಚನ—ಕಾವ ಸನ್ನದ್ಧನಾಗಿ ತಾ ಚೆಲುವನಾದಡೆ ಕಾಮಿನೀಜನವೆಲ್ಲ ಮೆಚ್ಚಬೇಕು. ವೀರನಾದಡೆ ವೈರಿಗಳು ಮೆಚ್ಚಬೇಕು. ಋಳನಾದಡೆ ತನ್ನ ತಾ ಮೆಚ್ಚಿಕೊಂಬ ಎನ್ನ ದೇವ ತೆಲುಗೇಶ್ವರನಲ್ಲಿ ತಾನು ಭಕ್ತನಾದಡೆ ದೇವರು ಮೆಚ್ಚಿ ಜಗವು ತಾ ಮೆಚ್ಚುವುದು.

(ಕವಿಚರಿತ್ರೆ (1972) ಪುಟ—383)

೪ ಬಾಹೂರ ಬೊಮ್ಮಯ್ಯ *

ಕಲ್ಯಾಣಪುರ ಪ್ರಾಂತದ ಬಾಹೂರೆಂಬಲ್ಲಿ ಬೊಮ್ಮಿತಂದೆಯೆಂಬ ಶರಣನಿದ್ದನು. ಒಂದು ಸೋಮವಾರ ಆತನು ತ್ರಿಪುರಾಂತಕ ಪ್ರಭುವನ್ನೀಕ್ಷಿಸಿ ಬಾಹೂರಿನಿಂದ ಕಲ್ಯಾಣಕ್ಕೆ ಬಂದಾಗ ಒಬ್ಬ ವ್ಯಾಪಾರಿ ಜೋಳವನ್ನು ರಾಶಿಹಾಕಿಕೊಂಡು 'ಶಂಕರ ಗಂಡನಂ ಕೊಳ್ಳಿರೇ' ಎಂದು ಕೂಗುತ್ತಿದ್ದನು. ಅದನ್ನು ನೋಡುತ್ತ ಬೊಮ್ಮಯ್ಯ ಬರುತ್ತಿರಲು ಒಬ್ಬ ಸವಣ ಕಟಕಿಯಿಂದ 'ಜೋಳದ ಹೆಸರು ಶಂಕರ ಎಂದು ಹೇಗಾಯಿತು ? ಜೋಳದ ರಾಶಿಯನ್ನು ಓ ಎನಿಸುವವರುಂಟೆ ?' ಎಂದನು. ಬೊಮ್ಮಯ್ಯನು ಆ ಮಾತನ್ನು ಕೇಳಿ ದಂಡಿಗೆಯಿಂದಿಳಿದು ಬಂದು ರಾಶಿಯನ್ನು ಪ್ರದಕ್ಷಿಣೆ ಮಾಡಿ ಶಿವನನ್ನು ನೆನೆದು 'ಪರಮ ಗುರುವೇ ಶಂಕರಾ ಶಂಕರಾ' ಎಂದು ಕರೆಯಲು ಜೋಳದ ರಾಶಿಯೊಳಗೆ 'ಹರುಷದಿಂದ ಓಯೆಂಬ ನುಡಿ ಮೂರು ಬಾರಿ ಆಗಲು' ಸವಣನು ಓಡಿದನು. ಶರಣರು ಸಂತಸಗೊಂಡರು. ಬೊಮ್ಮಯ್ಯ ಬಾಹೂರಿಗೆ ಹಿಂದಿರುಗಿದನು.

ಒಂದು ದಿನ ಸೋಮವಾರ ಬೊಮ್ಮಯ್ಯನು ಕಲ್ಯಾಣಕ್ಕೆ ಬಂದಾಗ ಪೆರ್ಮಾಡಿ ರಾಯನ ಆನೆ ಸಪ್ತಾವಸ್ಥೆಯ ಮದದಿಂದ ಮುಂದುಗಾಣದೆ ಕೊಂಬಿನ ಮೊನೆಯಲ್ಲಿ ಸೊಂಡಿಲನ್ನು ತೂಗಿ, ತನ್ನ ನೆರಳನ್ನೆ ಪ್ರತಿದಂತಿಯೆಂದು ಎರಗುತ್ತ ಮುನ್ನುಗ್ಗುತ್ತಿದ್ದಿತು. ಎದುರಿಗೆ ಬಂದ ಬೊಮ್ಮಯ್ಯನನ್ನು ಪಡಿಯರರು 'ತೊಲಗು ತೊಲಗು' ಎಂದರು. ಬೊಮ್ಮಯ್ಯನು ಅದನ್ನು ಲೆಕ್ಕಿಸದೆ 'ಪಡಿಪಡ ಸಾವವನ ಮನೆಯಾನೆಗೆ ಶಾಶ್ವತನ ಮನೆಯಾನೆ ತೊಲಗುವುದಲ್ಲ ತೆಗೆತೆಗೆ ನಿಲ್ಲಿತ್ತ ಬಾರದಿರುಯೆನ್ನಾಣೆ' ಎಂದು ಎತ್ತಿದ ಹಸ್ತ ನಿವಾರಣೆಗೆ ಹುಂಕರಿಸಿ ಬರುತ್ತಿದ್ದ ಆನೆ ಮಣ್ಣಾನೆಯಂತೆ ಮಿಡುಕದೆ ನಿಂತಿತು. ಪಸಾಯಿತರು ನಡೆದ ವಿಷಯವನ್ನು ಅರಸನಿಗೆ ತಿಳಿಸಿದರು.

ಈ ವಿಷಯವನ್ನು ತಿಳಿದ ಪೆರ್ಮಾಡಿರಾಯನು ಇದ್ದ ಸ್ಥಿತಿಯಲ್ಲೇ ಎದ್ದು ಬಂದು ಬೊಮ್ಮಯ್ಯನನ್ನು ಕಂಡು 'ಎಲೆ ಭಕ್ತ ನೀಂ ಶಾಶ್ವತನ ಮನೆಯಾನೆಯಾದೊಡೆ ಎನ್ನಾನೆಯೊಡನೆ ಕೈಯಿಕ್ಕಿ ಗೆಲ್ದುದುಚಿತವಲ್ಲವೆ ಮಂತ್ರದಿಂ ಮಾಯದಿಂ ಗತಿಸ್ತಂಭನಂ

---

* ಮದಕರಿಗಳಂ ಕೊಂದದಟಿಸುವ
ನೊದವಿಸುತ ಮುಗುಳಿತ್ತು ಮೆಱೆದರು
ಸದಯದಿಂದಿಱಭಕ್ತನುಂ ಬಾಹೂರಬೊಮ್ಮಯನು ॥

(ಬಸವಪುರಾಣ ಸಂಧಿ ೨೨–ಸೂಚನೆ)

ಈತನ ವಚನಗಳ ಸಂಖ್ಯೆ 45 ಇವುಗಳಲ್ಲಿ 'ಸಂಗನ ಬಸವಣ್ಣ ಪ್ರಿಯ ಬ್ರಹ್ಮೇಶ್ವರ ಲಿಂಗ' ಎಂಬ ಅಂಕಿತವಿದೆ. (ಕವಿ ಚರಿತ್ರೆ (1972) ಪುಟ 220

ಇವನು ಬಸವನ ಖಾಸ ಶಿಷ್ಯನಾಗಿದ್ದನೆಂದು ತೋರುತ್ತದೆ. ತನ್ನ ವಚನಗಳಲ್ಲಿ ಇತರ ವಚನಕಾರರ ಹೆಸರುಗಳೊಡನೆ ಅಜಗಣ್ಣನನ್ನೂ ನಿಜಗುಣನನ್ನೂ ಹೇಳುತ್ತಾನೆ. (ಕವಿಚರಿತ್ರೆ (1972) ಅನುಬಂಧ II–ಪುಟ55)

ಮಾಡಿದೊಡೆ ಕುಟಿಲನೆನಿಸುವುದಲ್ಲದೆ ಪರಾಕ್ರಮವಲ್ಲೆಂದು' ನುಡಿದನು. 'ಶರಣರ ಶಕ್ತಿಯನ್ನು ಅರಿಯದ ಅರಸನೇ' ಎನ್ನುತ್ತ ಬೊಮ್ಮಣ್ಣನು ಸಿಂಹದ ಕಣ್ಣುಗಳಂತಿದ್ದ ತನ್ನ ತಾಳವನ್ನು ನೆಲದಲ್ಲಿಟ್ಟು 'ಇದನ್ನು ಎತ್ತಿದರೆ ನಿನ್ನಾನೆಗೆ ಗೆಲವು' ಎಂದು ಹೇಳಿದನು. ಆನೆಯ ಕಟ್ಟನ್ನು ಬಿಚ್ಚಿದರು. ಆನೆ ಬಂದು ತಾಳವನ್ನು ತುಡುಕುವಾಗ ತಾಳದ ರಜ್ಜು ಪಾತಾಳಕ್ಕೆ ಬೇರೂರಿದ್ದಿತು. ಆನೆಯು ಸಿಂಹದ ಕಣ್ಣುಗಳಂತಿದ್ದ ತಾಳವನ್ನೆತ್ತಲಾರದೆ ಭೂಮಿಯ ಮೇಲೆ ಬಿದ್ದು ಪ್ರಾಣ ಬಿಟ್ಟಿತು. ಪೆರ್ಮಾಡಿರಾಯನಿಗೆ ಭೀತಿ ಹುಟ್ಟಿತು. ಬೊಮ್ಮಯ್ಯನು ಅವನನ್ನು ಕರುಣಿಸಿ ನೋಡಿ, ಸತ್ತ ಆನೆಗೆ ಪ್ರಾಣವನಿತ್ತು ಬಾಹೂರಿಗೆ ಹೋದನು. ಅವನ ಕೀರ್ತಿ ಹಬ್ಬಿತು.

ಒಂದು ದಿವಸ ಬೊಮ್ಮಯ್ಯ ಕಲ್ಯಾಣಪುರದ ಹೊರವನದಲ್ಲಿ ಬರುತ್ತಿರುವಾಗ ಸಂಜೆಯಾಯಿತು. ತ್ರಿಪುರಾಂತಕಪ್ರಭುವಿನೋಲಗದಲ್ಲಿ ಕಲ್ಯಾಣದೇವಿ ಎನ್ನುವವಳು ಶಿವಭಕ್ತಿ ಸಂತಾನದ ನಡುವೆ, ಕವಿ ಗಮಕಿ ವಾದಿ ವಾಗ್ಮಿಗಳ ಮಧ್ಯೆ ನರ್ತಿಸುತ್ತಿದ್ದಳು. ಬಾಹೂರ ಬೊಮ್ಮಯ್ಯ ಅಲ್ಲಿಗೆ ಬಂದಾಗ ಜನ ಚಲ್ಲಾಪಿಲ್ಲಿಯಾದರು. ನರ್ತನ ನಿಂತಿತು. ಬೊಮ್ಮಯ್ಯನು 'ಹರನ ಮುಂದಣ ಪಾತ್ರವೇಕಾಡದೆನಲಲ್ಲಿ' ಕೇಳಲು ಕುಪಿತನಾದ ಸುಖ ಪ್ರಿಯನೆಂಬುವವನು 'ಆಳೋಕಿಸುವ ಜನದ ಕಣ್ಗೆ ಕಸವಂ ಹೊಯ್ದು ಇನ್ನಾಡವೇ ಕೆಡ್ದುದಂ ಪಾತ್ರವೇಕಾಡುವುದು' ಎಂದುದಲ್ಲದೆ 'ಜೋಳವನ್ನು ನುಡಿಸಿದ ಗರ್ವ, ಅರಸನ ಆನೆಯ ಗಂಡುಗೆಡಿಸಿದೆನೆಂಬ ಗರ್ವವೇಕೆ ಎನ್ನುತ್ತ ತನ್ನ ಕೈಯಲ್ಲಿದ್ದ ಕಬ್ಬನ್ನು ತೋರಿಸಿ ಇದನ್ನು ಈ ಕಲ್ಲನಂದಿಗೆ ತಿನ್ನಿಸಿದರೆ ಈ ನರ್ತನವನ್ನು ನೀನು ನಿಲ್ಲಿಸಿದ ಕೋಪ ನನಗೆ ಹೋಗುತ್ತದೆ' ಎಂದನು. ಆಗ ಬೊಮ್ಮಯ್ಯನು 'ಕಬ್ಬನ್ನೆಲ್ಲಾ ತಿನ್ನಿಸುತ್ತೇನೆ, ಅರಸನು ಅಚ್ಚರಿಗೊಳ್ಳುವಂತೆ ಆ ನಂದಿಯನ್ನು ನನ್ನೊಡನೆ ನಡೆಯಿಸುತ್ತೇನೆ. ಅದಕ್ಕೆ ಈ ಕೆರೆಯ ನೀರನ್ನು ಕುಡಿಸುತ್ತೇನೆ. ದೇವಾಲಯವನ್ನು ಪ್ರದಕ್ಷಿಣೆ ಮಾಡಿಸಿ ಮೊದಲಿನಂತೆಯೇ ಹರಾಲಯದಲ್ಲಿರಿಸುತ್ತೇನೆ' ಎಂದು ಪ್ರತಿಜ್ಞೆ ಮಾಡಿ ಅದನ್ನು ನೆರವೇರಿಸಿದನು. ಇದನ್ನು ಕಂಡ ಪೆರ್ಮಾಡಿರಾಯನೇ ಮೊದಲಾದವರು ಅಚ್ಚರಿಗೊಂಡು ಬೊಮ್ಮಯ್ಯನ ಭಕ್ತಿಗೆ, ಶಕ್ತಿಗೆ ಮೆಚ್ಚಿ ನಮಸ್ಕರಿಸಿದರು. ಪುಷ್ಪವೃಷ್ಟಿ, ದುಂದುಭಿ ಧ್ವನಿಗಳ ಮಧ್ಯೆ ಬಂದ ಪುಷ್ಪಕ ವಿಮಾನವು ಬೊಮ್ಮಯ್ಯನನ್ನು ಕೈಲಾಸಕ್ಕೆ ಕರೆದೊಯ್ದಿತು. ಶಿವನು ಆತನಿಗೆ ಗಣ ಪದವಿಯಿತ್ತು ಸತ್ಕರಿಸಿದನು.

೫ ಕೋವೂರ ಬೊಮ್ಮಯ್ಯ *

ಬಿಜಾಪುರ ಜಿಲ್ಲೆಯಲ್ಲಿರುವ ಕೋವೂರನ್ನು ಚಾಲುಕ್ಯ ರಾಜನಾದ ಬೊಮ್ಮಯ್ಯನು

---

*ಇವನು ವಚನಗಳನ್ನು ಬರೆದಿದ್ದಾನೆಯೋ ಇಲ್ಲವೋ ತಿಳಿಯದು. ಒಂದು ವೇಳೆ ಬರೆದಿದ್ದರೆ ಇವನ ಅಂಕಿತವು 'ಅಂಬುಧಾರಾ ರಾಮನಾಥ'ನೆಂದಿರಬೇಕು.
(ಕವಿ ಚರಿತ್ರೆ (1972) ಅನುಬಂಧ II ಪುಟ–97)

ಆಳುತ್ತಿದ್ದನು. ಆತನು ಹಿರಿಯ ಶಿವಭಕ್ತನಾಗಿ ಆ ಊರಿನ ಅಂಬುಧಾರಾ ರಾಮನಾಥನಿ
ಅತ್ಯಂತ ನಿಷ್ಠೆಯಿಂದ ನಡೆದುಕೊಳ್ಳುತ್ತಿದ್ದನು.

ಆ ಕಾಲದಲ್ಲಿ ಕೋವೂರು ಜೈನರ ಪ್ರಾಬಲ್ಯಕ್ಕೆ ಒಳಗಾಗಿತ್ತು. ಅವರಲ್ಲಿ ಮುನ್ನೂ
ಜನಮಾತ್ರ ಶಿವಭಕ್ತರಾಗಿದ್ದು ಅರಸನ ಅನುಯಾಯಿಗಳಾಗಿದ್ದರು. ಈ ಶಿವಭಕ್ತರಿಂ
ಕೂಡಿದ ಅರಮನೆ ಶಿವಪುರದಂತೆ ಸದಾ ರಂಜಿಸುತ್ತಿತ್ತು.

ಅರಸನಿಗೆ ಹನ್ನೆರಡು ಜನ ಪತ್ನಿಯರಿದ್ದರು. ಅವರಲ್ಲಿ ಕಳಾವತಿಯೆಂಬುವಳಿ
ಮಲ್ಲಿದೇವನೆಂಬ ಮಗನಿದ್ದನು. ಅವನಿಗೆ ವಯಸ್ಸಿನೊಡನೆ ಶಿವಭಕ್ತಿಯೂ ಬೆಳೆಯಿತು.
ಹೀಗೆ ಹದಿನಾರುವರುಷ ತುಂಬಿದ ಶಿವಭಕ್ತನಾದ ಮಗನನ್ನು ನೋಡಿ ಅರಸನೂ
ಕಳಾವತಿಯೂ ಸಂತೋಷಭರಿತರಾದರು.

ಹೀಗಿರುವಲ್ಲಿ ಅರಸನಿಗೆ ಗಣಪರ್ವದ ನೆನಪು ಬಂದಿತು. ಕೂಡಲೆ ಆತನು ಪತ್ನಿ
ಪುತ್ರರನ್ನೂ ಮಂತ್ರಿಮುಖ್ಯರನ್ನೂ ಬರಮಾಡಿಕೊಂಡು ತಾನು ಗಣಪರ್ವದ ನಿಮಿತ್ತ
ಆರು ತಿಂಗಳು ರಾಮನಾಥ ದೇವಾಲಯದಲ್ಲಿರುವುದಾಗಿಯೂ ಆ ಮಧ್ಯೆ ಸರ್ವನಾಶವಾದರೂ
ಸಹ ತಾನು ಶಿವನ ಸೇವೆಯಿಂದ ವಿಮುಖನಾಗುವುದಿಲ್ಲವೆಂದೂ ಹೇಳಿ, ತನ್ನ ಮುನ್ನೂರ
ಜನ ಭಕ್ತರೊಡನೆ ಅಂಬುಧಾರಾ ರಾಮನಾಥನಲ್ಲಿಗೆ ತೆರಳಿದನು.

ಇತ್ತ ಅರಸನಿಲ್ಲದ ವೇಳೆಯಲ್ಲಿ ಜೈನರು ಅರಸನ ಗಣಪರ್ವವನ್ನು ಕೆಡಿಸಬೇಕೆಂದು
ಯೋಚಿಸಿ ಒಬ್ಬ ಸವಣನಿಗೆ ಶಿವಭಕ್ತನ ವೇಷವನ್ನು ಹಾಕಿ ಮಲ್ಲಿದೇವನನ್ನು ಕಾಣಲು
ಅರಮನೆಗೆ ಕಳಿಸಿದರು. ಮಲ್ಲಿದೇವನು ಆತನನ್ನು ನಿಜವಾದ ಭಕ್ತನೆಂದೇ ನಂ
ಸತ್ಕರಿಸಿದನು. ಆ ಕಪಟಭಕ್ತನು ಯಾರೂ ಇಲ್ಲದ ವೇಳೆಯಲ್ಲಿ ಮಲ್ಲಿದೇವನನ್ನು ಕೊಂದ
ಪರಾರಿಯಾದನು.

ಸ್ವಲ್ಪ ಸಮಯದ ಅನಂತರ ಅಲ್ಲಿಗೆ ಬಂದ ಕಳಾವತಿಯು ಸತ್ತು ಬಿದ್ದಿದ್ದ ಮಗನನ
ನೋಡಿ ದುಃಖಿತೆಯಾದಳು. ಆಕೆಯು ಹಿರಿಯರನ್ನು ಬರಮಾಡಿಕೊಂಡು ಸಮಾ
ಲೋಚಿಸಿದಳು. ಈ ಘೋರ ಕೃತ್ಯಕ್ಕೆ ಜೈನರೇ ಕಾರಣರೆಂದೂ ಅರಸನು ಮಾಡುತ್ತಿ
ಗಣಪರ್ವವನ್ನು ಕೆಡಿಸುವ ಸಲುವಾಗಿ ಈ ಕೃತ್ಯವನ್ನು ನಡೆಸಿದರೆಂದೂ ತಿಳಿದು 'ಈ ಸಮಾ
ತಿಳಿದರೆ ಗಣಪರ್ವ ಅಳಿಯುವುದು ಬೇಡ' ಎಂದು ನಿರ್ಧರಿಸಿ ಶವವನ್ನು ಹಿಂಗಿಸಿ ಒಂ
ಗೋಪ್ಯಸ್ಥಾನದಲ್ಲಿರಿಸಿದಳು.

ಆರು ತಿಂಗಳಾದ ಮೇಲೆ ಗಣಪರ್ವ ಮುಗಿಯಿತು. ಅರಸನು ಅಂಬುಧಾ
ರಾಮನಾಥಾಲಯದಿಂದ ಹೊರಟುಬಂದು ಒಂದು ವಟವೃಕ್ಷದ ಕೆಳಗೆ
ಗೋಷ್ಠಿಯಲ್ಲಿದ್ದನು. ಇದನ್ನು ತಿಳಿದ ಜೈನರು ತಮ್ಮ ಬಸದಿಯವರನ್ನೊಡಗೂಡಿ ಬಂ
ರಾಜನಿಗೆ ಕಾಣಿಕೆಯಿತ್ತು 'ರಾಜನೇ ಗಣಪರ್ವ ಮುಗಿಯಿತೆ ? ಇದರಿಂದ ನಿನಗೆ ದೊ
ಪ್ರತ್ಯಕ್ಷ ಫಲವೇನು ?' ಎಂದು ಕುಚೋದ್ಯ ಮಾಡಿದರು.

"ಈಗ ನಾವು ವಟವೃಕ್ಷವನ್ನು ನಿಂತ ನೆಲೆಯಲ್ಲಿಯೇ ಭಸ್ಮ ಮಾಡುವೆವು. ನೀವು ಅದನ್ನು ಪುನಃ ಚಿಗುರಿಸಿದರೆ ನಾವು ನಿಮ್ಮ ಮತವನ್ನು ಅವಲಂಬಿಸುತ್ತೇವೆ ಎಂದು ಹೇಳಿ ಜೈನರು ಕುಟಿಲಮಂತ್ರವನ್ನು ಪಠಿಸುತ್ತಾ ಮರಕ್ಕೆ ಅಕ್ಷತೆಯನ್ನು ಎರಚಿದರು. ಮರ ಧಗಧಗನೆ ಉರಿದು ಬೂದಿಯಾಯಿತು. ಈ ಮರುಳುಗಳ ಆಟಕ್ಕೆ ಮರುಕಗೊಂಡ ಬೊಮ್ಮಯ್ಯನು ಮನದಲ್ಲಿಯೇ ಚಂದ್ರಶೇಖರನನ್ನು ಸ್ಮರಿಸಲು ಆ ಮರವು ಬೂದಿಯೊಳಗಿಂದ ಅಂಕುರಿಸಿ ಹೆಮ್ಮರವಾಗಿ ಮೊದಲಿಗಿಂತಲೂ ಹತ್ತು ಮಡಿ ಉದ್ದಗಲವಾಗಿ ಪುಣ್ಯಕುಜದಂತೆ ಕಂಗೊಳಿಸಿತು. ಈ ಅದ್ಭುತ ಶಕ್ತಿಯನ್ನು ಕಂಡು ಹೆದರಿ ಓಡುತ್ತಿದ್ದ ಜೈನರನ್ನು ಅರಸನು ಬರಮಾಡಿಕೊಂಡು ವಿವೇಕವನ್ನು ಹೇಳಿ ಅರಮನೆಗೆ ಹಿಂದಿರುಗಿದನು.

ಹೀಗೆ ಬಂದ ಅರಸನಿಗೆ ಅವನ ಹನ್ನೆರಡು ಮಂದಿ ಅರಸಿಯರು ಆರತಿಯೆತ್ತಿದರು. ಆದರೆ ಕಳಾವತಿಯ ಕಣ್ಣಿನಿಂದ ಧಾರಾಕಾರವಾಗಿ ನೀರು ಸುರಿಯುತ್ತಿದ್ದುದನ್ನು ಕಂಡ ರಾಜನು ಮಗನ ಸಾವಿನ ಸುದ್ದಿಯನ್ನು ತಿಳಿದನು. ಆತನು ಕೋಪೋದ್ರಿಕ್ತನಾಗಿ ಮಗನ ಶರೀರವಿದ್ದಲ್ಲಿಗೆ ಬಂದು 'ಮೃಡಪದಸಮಾಧಿ ಇನ್ನು ಸಾಕು ಮಗು ಏಳೇಳೆಂದು' ಸರ್ವಾಂಗವನ್ನು ಪ್ರೀತಿಯಿಂದ ಸವರಿದನು. ತಂದೆಯ ಹಸ್ತಸ್ಪರ್ಶದಿಂದ ಮಲ್ಲಿದೇವನು ನಿದ್ರೆ ತಿಳಿದಂತೆ ಎದ್ದು ಕುಳಿತು ತಂದೆಯನ್ನು ಆಲಿಂಗಿಸಿಕೊಂಡನು. ಜೀವಪಡೆದ ಬಾಲಕನನ್ನು ನೋಡಿ ಎಲ್ಲರೂ ಆನಂದಪಟ್ಟರು. ಮಗನು ಜೀವವನ್ನು ಮರಳಿ ಪಡೆದ ಸವಿನೆನಪಿಗಾಗಿ 'ಗಣಪರ್ವ ಇನ್ನೊಮ್ಮೆ ನಡೆಯಲಿ' ಎಂದು ಅರಸನು ಆಜ್ಞೆ ಮಾಡಿದನು.

ಗಣಪರ್ವಕ್ಕೆ ಬೇಕಾಗಿದ್ದ ಇಪ್ಪತ್ತನಾಲ್ಕು ಖಂಡುಗ ಅಕ್ಕಿಯನ್ನು ಸಿದ್ಧಪಡಿಸಲು ದಾಸಿಯರಿಗೆ ಹೇಳಲು, ಸಲಿಗೆಯುಳ್ಳ ದಾಸಿಯೊಬ್ಬಳು ಅಷ್ಟು ಭತ್ತವನ್ನು ಕುಟ್ಟಲು ಕೊತ್ತಳದ ಮಾರಿಮಸಣಿಯೇ ಬರಬೇಕೆಂದಳು. ಇದನ್ನು ತಿಳಿದ ಅರಸನು ಕೊತ್ತಳದ ಉಗ್ರದೇವತೆಯಾದ ಮಾರಿ ಮಸಣಿಕಬ್ಬೆಯಿಂದ ಅಷ್ಟು ಅಕ್ಕಿಯನ್ನು ಸಿದ್ಧಪಡಿಸಿಕೊಂಡು ಅತ್ಯಂತ ಸಂಭ್ರಮದಿಂದ ಗಣಪರ್ವವನ್ನು ಮಾಡಿದನು.

ಇದನ್ನೆಲ್ಲಾ ನೋಡಿ ಶ್ರಮಣರ ಅಸೂಯೆ ಕೆರಳಿತು. ಅವರು 'ಅರಸನೆ ಪರ್ವ ಪರ್ವವೆಂದು ಹೇಳಿ ಶರಣರು ಉಂಡುಹೋದುದನ್ನು ಕಂಡೆವಲ್ಲದೆ ನಿಮ್ಮ ದೇವರು ಉಂಡುದನ್ನು ಕಾಣಲಿಲ್ಲ. ಆದ್ದರಿಂದ ನೀನು ಅಂಬುಧಾರಾ ರಾಮನಾಥನಿಗೆ ನಾವೆಲ್ಲರೂ ಕಾಣುವಂತೆ ಆರೋಗಿಸುವುದು' ಎಂದರು.

ಅರಸನು ಅವರ ಮೂರ್ಖತನಕ್ಕೆ ಮನದಲ್ಲಿಯೇ ಪಶ್ಚಾತ್ತಾಪ ಪಟ್ಟು 'ಹಾಗೆಯೇ ಆಗಲೆಂದು' ಹೇಳಿ ಪಡಿಯರನನ್ನು ಕರೆದು ಅಂಬುಧಾರಾ ರಾಮನಾಥನನ್ನು ಕರೆದು ತರುವಂತೆ ಹೇಳಿದನು. ಅದರಂತೆ ಪಡಿಯರನು ರಾಮನಾಥನಾಲಯಕ್ಕೆ ಬಂದು ದೇವದೇವನ ಮುಂದೆ ನಿಂದು ಅರಸನು ಹೇಳಿದ ಮಾತುಗಳನ್ನು ಉಸುರಿದನು. ಭಕ್ತನ ಕರೆಗೆ ಓಗೊಟ್ಟು ಅರಮನೆಯ ಪ್ರವೇಶದ್ವಾರದಲ್ಲಿ ಕೋಟಿಸೂರ್ಯರನ್ನು ಹೋಲುವ ಕಾಂತಿಯಿಂದ

ರಾಮನಾಥ ಕಾಣಿಸಿಕೊಂಡನು. ರಾಮನಾಥನನ್ನು ಕಂಡು ಬೊಮ್ಮತಂದೆ ಓಡೋಡಿ ಬಂದು ನಮಸ್ಕರಿಸಿ ಪರಿಪರಿಯಾಗಿ ಸ್ತುತಿಸಿದನು. ಶಂಭುವನ್ನು ನೋಡಿದ ಜೈನರು ಪರಮಾತ್ಮ ವಿಶ್ವವ್ಯಾಪಿ ಎಂಬುದನ್ನು ಮನದಟ್ಟುಮಾಡಿಕೊಂಡು ತಳಮಳಗೊಂಡರು. ಇದನ್ನೆಲ್ಲಾ ನೋಡಿದ ಬೊಮ್ಮಯ್ಯನಿಗೆ ಖೇದವಾಯಿತು. ಆತನು 'ಇದುವರೆಗೆ ಜೈನರಿಂದಾದ ನೂರು ತಪ್ಪುಗಳನ್ನು ಕ್ಷಮಿಸಿದೆನು. ಇನ್ನು ಮುಂದೆ ಕ್ಷಮಿಸಲಾಗುವುದಿಲ್ಲ' ಎಂದು ಎಚ್ಚರಿಸಿ ಅವರನ್ನು ಕಳಿಸಿದನು.

ಇತ್ತ ಕೋವೂರೊಳಗೆಲ್ಲ ಕಾವುಳವೆದ್ದಂತೆ ಜೈನರೆಲ್ಲ ಒಟ್ಟಾಗಿ ಪುಷ್ಪಾಂಜಲಿ ಎಂಬ ನರಕ ಪರ್ವವನ್ನು ಮಾಡತೊಡಗಿದರು. ಆ ನೆಪದಲ್ಲಿ ಶಿವದ್ರೋಹವನ್ನು ಬಗೆದರು. ಇದನ್ನು ಕಂಡ ಪಡಿಯರರು ಬಂದು 'ಜೈನರು ಪುಷ್ಪಾಂಜಲಿ ಎಂಬ ಪರ್ವವನ್ನು ನಡೆಸುತ್ತ ಶಿವದ್ರೋಹವನ್ನು ಮಾಡುತ್ತಿದ್ದಾರೆ' ಎಂದು ಅರಸನಿಗೆ ತಿಳಿಸಿದರು. ಸುದ್ದಿಯನ್ನು ತಿಳಿದ ದೊರೆ ಅತ್ಯಂತ ಕೋಪಾವಿಷ್ಟನಾಗಿ ಜೈನರ ಮೇಲೆರಗಿ ಜೈನ ಪಡೆಯನ್ನು ನಾಶಮಾಡಿ ಬಸದಿಗಳನ್ನು ನೆಲಸಮಮಾಡಿ ಆ ಪಟ್ಟಣವನ್ನು ಶಿವಪುರವನ್ನಾಗಿ ಮಾಡಿದನು. ಶಿವ ಶರಣರು ಕಿಕ್ಕಿರಿದು ನೆರೆದು ಶಿವಾನುಭವಗೋಷ್ಠಿಗಳನ್ನು ನಡೆಸುತ್ತಿದ್ದರು.

ಒಂದು ದಿನ ಶರಣರ ಗೋಷ್ಠಿ ನಡೆಯುತ್ತಿದ್ದ ಸಮಯದಲ್ಲಿ ನಂದಿಯುಂಡಿಗೆಯ ರಾಯಸವೊಂದು ಸಭಾಮಧ್ಯದಲ್ಲಿ ಬಂದುಬಿದ್ದಿತು. ಅದನ್ನು ತೆಗೆದು ನೋಡಲು ಅದರಲ್ಲಿ ಅರಸನು ಮುನ್ನೂರುಜನ ವೀರಮಾಹೇಶ್ವರರೊಡನೆ ನಾಳೆ ಕೈಲಾಸಕ್ಕೆ ಬರಬೇಕೆಂದು ಬರೆದಿದ್ದಿತು. ಅದನ್ನು ನೋಡಿದ ಬೊಮ್ಮಯ್ಯನು ತನ್ನ ಸಂಸಾರವನ್ನು ನೀಗಿ ಶಿವನ ಅಪ್ಪಣೆಯಂತೆ ಅವನ ಸಾನ್ನಿಧ್ಯವನ್ನು ಸೇರಬೇಕೆಂದನು.

ಆತನು ತನ್ನ ಮಗನನ್ನು ಕರೆದು ಶಿವನಲ್ಲಿ ಶಿವಶರಣರಲ್ಲಿ ನಡೆದುಕೊಳ್ಳಬೇಕಾದ ರೀತಿ ನೀತಿಗಳನ್ನು ತಿಳಿಸಿ ಮೂನೂರ್ವರು ವೀರಮಾಹೇಶ್ವರರೊಡನೆ ಅಂಬುಧಾರಾ ರಾಮನಾಥನಲ್ಲಿಗೆ ನಡೆದನು. ಎಲ್ಲರೂ ರಾಮನಾಥನ ಎದುರಿಗೆ ನಿಂತು ತಾವು ಈ ನಶ್ವರ ದೇಹದಿಂದ ಇರುವುದಿಲ್ಲವೆಂದೂ ಆತ್ಮಾರ್ಪಣೆ ಮಾಡಿಕೊಳ್ಳುವೆವೆಂದೂ ನುಡಿದರು. ಬೊಮ್ಮಯ್ಯ ಖಡ್ಗದಿಂದ ಕತ್ತನ್ನು ಕತ್ತರಿಸಿಕೊಂಡು ರಾಮನಾಥನ ಮುಂದಿಟ್ಟನು. ಅವನನ್ನನುಸರಿಸಿ ಎಲ್ಲರೂ ಆತ್ಮಾರ್ಪಣೆ ಮಾಡಿಕೊಂಡರು. ಆಗ ಮುನ್ನೂರು ಪುಷ್ಪಕಗಳು ಬಂದು ಅವರನ್ನೆಲ್ಲಾ ಕೈಲಾಸಕ್ಕೆ ಕೊಂಡೊಯ್ದವು. ಶಿವ ತನ್ನ ಭಕ್ತರನ್ನು ನಂದೀಶನೇ ಮುಂತಾದ ಗಣಮುಖ್ಯರ ಮುಂದೆ ಹಾಡಿ ಹೊಗಳಿ ಗಣಪದವಿಯನ್ನಿತ್ತನು.

III ವಿಮರ್ಶೆ

ಕಥಾಸಾರದ ಅವಲೋಕನದಿಂದ ಹರಿಹರನ ರಗಳೆಗಳು ಸ್ಥೂಲವಾಗಿ ಒಂದೆ ಚೌಕಟ್ಟಿನಲ್ಲಿ ರಚಿತವಾಗಿರುವುದು ಕಂಡುಬರುತ್ತದೆ. ಪ್ರತಿಯೊಂದು ರಗಳೆಯ ಆರಂಭದಲ್ಲಿ ಕಥಾನಾಯಕನ ಸ್ತುತಿರೂಪವಾದ ಒಂದು ಕಂದ ಅಥವಾ ವೃತ್ತವಿರುತ್ತದೆ. ಮುಂದೆ

ರಗಳೆಯಲ್ಲಿ ನೇರವಾಗಿ ಕಥಾನಾಯಕನ ಊರು, ಹೆಸರು, ತಾಯಿ ತಂದೆ, ನಿತ್ಯನೇಮ ಕಾರ್ಯಕ್ಷೇತ್ರ, ಭಕ್ತ ಮತ್ತು ಭಗವಂತನ ಸಂಬಂಧ, ಶಿವೈಕನಿಷ್ಠೆ, ಅದಕ್ಕೆ ಒದಗಿಬರುವ ಅಡ್ಡಿ ಆತಂಕಗಳು, ಅದರಲ್ಲಿ ಶರಣನ ವಿಜಯ, ಅನಂತರ ಪುಷ್ಪಕದ ಆಗಮನ, ಭಕ್ತ, ಕೆಲವುಬಾರಿ ಅವನ ಜೊತೆಯವರೂ ಆ ವಿಮಾನದಲ್ಲಿ ರಜತಾದ್ರಿಗೆ ಹೋಗುವುದು, ಶಿವನು ಕಥಾನಾಯಕನಿಗೆ ಗಣಪದವಿಯನ್ನೀಯುವುದು, ಮಂಗಳಾಶಾಸನ ಹೀಗೆ ಸಾಗುತ್ತದೆ.

ಆದರೆ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅವನು ನೀಡುವ ಒಂದೊಂದು ವಿವರವೂ ಭಿನ್ನ ಭಿನ್ನವಾಗಿ ನಿಲ್ಲುತ್ತವೆ. ಅವನ ಕವಿತಾವೇಶದಲ್ಲಿ ಪ್ರತಿಭೆಯ ಮಹಾಪೂರದಲ್ಲಿ ಯಾವುದೂ ಪುನರುಕ್ತವಾಗುವುದಿಲ್ಲ. ಪ್ರಸ್ತುತಸಂಕಲನದಲ್ಲಿ ಬರುವ ಒಂದೆರಡು ಪ್ರಸಂಗ ಗಳನ್ನು ಉದಾಹರಣೆಗಾಗಿ ಗಮನಿಸಬಹುದು. ಹರಿಹರ ಭಕ್ತರನ್ನು ಪರಿಚಯ ಮಾಡಿ ಕೊಡುವುದೇ ಒಂದು ವೈಶಿಷ್ಟ್ಯ. ಅವನ ವರ್ಣನೆಯಿಂದ ಆ ಭಕ್ತನ ಸಾಕ್ಷಾತ್ ಚಿತ್ರಣ ಓದುಗನಲ್ಲಿ ಸ್ಪಷ್ಟವಾಗಿ ಮೂಡುತ್ತದೆ.

ಉದಾಹರಣೆಗೆ—

ಸುರಗಿಯ ಚವುಂಡರಾಯಂ ತನ್ನ ನಾಮವದು
ಪುರಹರನನೊಲುಮೆಯಿಂದರ್ಚಿಸುವ ನೇಮವದು
ನಿಚ್ಚಟಂ ನಿರ್ಮಳಂ ನಿರುಪಮಂ ಕಡುಮಾನಿ
ಅಚ್ಚ ಶಿವಭಕ್ತನುತ್ಕೃಷ್ಟನೀಶಧ್ಯಾನಿ (೩)*
ಮುಸುಟೆಯ ಚವುಂಡರಾಯಂ ಸುಖವನಪ್ಪುವಂ
ಆತನ ಶಿವಾಚಾರಮಂ ಪೇಳಲೆನ್ನಳವೆ
ನೂತನಂ ಧರಣಿತಳಕೆ ಬಣ್ಣಿಸಲೆನ್ನಳವೆ
ಶರಣಾರ್ಥಿ ಎನುತ ಹುಟ್ಟಿದನಮಮ ಜಂಗಮಕೆ
ಶರಣಾರ್ಥಿಯೆನುತ ಬೆಳೆದಂ ಪೊಸತು ಕಲಿಯುಗಕೆ (೧೧)

ಹೀಗೆಯೇ ತೆಲುಗು ಜೊಮ್ಮಯ್ಯ (೨೨), ಬಾಹೂರು ಬೊಮ್ಮಯ್ಯ (೪೫), ಕೋವೂರು ಬೊಮ್ಮಯ್ಯ (೬೮) ಮುಂತಾದ ಶರಣರ ವರ್ಣನೆಯೂ ಬರುತ್ತದೆ. ಹರಿಹರನು ಮಾಡಿಕೊಡುವ ಶರಣರ ಪರಿಚಯದಿಂದ ಓದುಗನಿಗೆ ಅವರ ಬಗ್ಗೆ ಆತ್ಮೀಯತೆ ಉಂಟಾಗು ತ್ತದೆ. ಇದೇ ರೀತಿ ಈ ಸಂಕಲನದಲ್ಲಿ ಸತ್ತ ಎತ್ತನ್ನು ಶರಣರು ಮೇಲೆತ್ತುವ ಸಂದರ್ಭದಲ್ಲಿ ಎದ್ದು ಬರುವ ಎತ್ತುಗಳ ವರ್ಣನೆ (೧೪, ೧೬, ೬೨)ಗಳು ಕೂಡ ಮೇಲಿನ ಮಾತಿಗೆ ಸಮರ್ಥನೆಯನ್ನು ನೀಡುತ್ತವೆ.

ಹರಿಹರ ಸಹಜ ಭಕ್ತ. ಹಾಗಾಗಿ ಅವನ ಕಾವ್ಯಗಳಲ್ಲಿ ಭಕ್ತ ಮತ್ತು ಭಗವಂತನ ಸಂಬಂಧ ತುಂಬ ಮಧುರವಾಗಿ, ಸಮರ್ಥವಾಗಿ ಚಿತ್ರಿತವಾಗಿದೆ. ಈ ಸಂದರ್ಭಗಳಲ್ಲಿ

* ಇಲ್ಲಿ ಬರುವ ಸಂಖ್ಯೆಗಳು ಪ್ರಸ್ತುತ ಸಂಕಲನದ ಪುಟಸಂಖ್ಯೆಯನ್ನು ನಿರ್ದೇಶಿಸುತ್ತವೆ.

ಹರಿಹರನ ಚಿತ್ತವೃತ್ತಿಯ ಪರಿಪಕ್ವತೆಯನ್ನು ಕಾಣಬಹುದು. ಹರಿಹರನ ಶಿವ ಕರುಣಾಮಯಿ, ಭಕ್ತ ಶಿವೇಕನಿಷ್ಠ. ಭಕ್ತನ ನಿಷ್ಠೆಗೆ ಶಿವನೂ ಅಂಜುತ್ತಾನೆ. ಸುರಗಿ ಚೌಡಯ್ಯನಿಗೆ ಶಿವನು ಕನಸಿನಲ್ಲಿ 'ಹಸಿದೆನೆಲೆ ಮಗನೆ' ಎನ್ನುತ್ತಾನೆ. ಚೌಡಯ್ಯನು ಎಡೆಮಾಡಿ ಬೇಡಿದಾಗ ಶಿವನು ಊಟಮಾಡುವುದಿಲ್ಲ. ಆಗ ಚೌಡಯ್ಯನು ಕುತ್ತಿಗೆಗೆ ಸುರಗಿಯನ್ನು ಆನಿಸುತ್ತಾನೆ. ಕೂಡಲೆ 'ಆರೋಗಿಸಿದಂ ಶಿವಂ ಚೌಂಡರಾಯಂಗಂಜಿ'. ಭಕ್ತನಿಗೆ ಶಿವನಲ್ಲಿ ಅಪಾರ ವಿಶ್ವಾಸ, ನಂಬಿದ ಭಕ್ತನನ್ನು ಶಿವನು ಕೈಬಿಡುವುದಿಲ್ಲ ಎನ್ನುವ ಅಚಲನಂಬಿಕೆ. ಕೋವೂರು ಬೊಮ್ಮಯ್ಯನ ರಗಳೆಯಲ್ಲಿ ಒಂದು ಸಂದರ್ಭ ಹೀಗೆ ಬರುತ್ತದೆ—ಕೋವೂರು ಬೊಮ್ಮಯ್ಯ ಗಣಪರ್ವವನ್ನು ತೀರಿಸಿಕೊಂಡು ಊರಿಗೆ ಹಿಂದಿರುಗುತ್ತಾನೆ. ಹನ್ನೆರಡು ಜನ ರಾಣಿಯರು ಆರತಿಯೆತ್ತುತ್ತಾರೆ. ಕಳಾವತಿ ಎಂಬ ರಾಣಿ ಆಗ ಕಣ್ಣೀರಿಕ್ಕುತ್ತಾಳೆ. ಬೊಮ್ಮಯ್ಯ ವಿಚಾರಿಸಲಾಗಿ ತನ್ನ ಮಗ ಜೈನರ ಕುಹಕದಿಂದ ಸತ್ತ ಎಂಬ ಸುದ್ದಿ ತಿಳಿಯುತ್ತದೆ. ಆಗ ಬೊಮ್ಮಯ್ಯ ಕಳವಳ ಪಡುವುದಿಲ್ಲ. ದೃಢಮನದಿಂದ 'ಅಪ್ಪುದಿಂದೆಂಬ ನಿಶ್ಚಯವಿೀವ ಪುರಹರಂ' ತಪ್ಪದೆನ್ನಿಚ್ಛೆಯಂ ಸಲಿಸನೇ ಶಂಕರಂ' ಎಂದು ಹೇಳುತ್ತ ಹೋಗಿ ಮಗನನ್ನು ಏಳಿಸಿಕೊಂಡು ಬರುತ್ತಾನೆ. ಅಷ್ಟೇ ಅಲ್ಲದೆ ಮತ್ತೊಂದು ದಿವಸ ಜೈನರು ಬೊಮ್ಮಯ್ಯನಿಗೆ 'ನಿಮ್ಮ ಭಗವಂತನನ್ನು ಕಾಣಿಸು' ಎನ್ನುತ್ತಾರೆ. ಆಗ ಬೊಮ್ಮಯ್ಯನು 'ಪಡಿಯಱನಂ ಕರೆದು ನೀಂ ಪೋಗಿ ಪುರದ ಪಶ್ಚಿಮಭಾಗದೊಳ್ ನಿಂದು ಅಂಬುಧಾರಾ ರಾಮನಾಥಂಗೆ ಎನ್ನೊಡೆಯಂಗೆ ಬಿನ್ನೈಸಿ ಬಿಜಯಂಗೈಸಿಕೊಂಡು ಬಾಯೆಂದು' ಕಳಿಸುತ್ತಾನೆ. ಶಿವನು ಕೋವೂರು ಬೊಮ್ಮಯ್ಯನ ಮಾತನ್ನು ನಡೆಸಿಕೊಡುತ್ತಾನೆ. ಈ ಪ್ರಸಂಗದಿಂದ ಭಕ್ತನ ಅಚಲನಂಬಿಕೆ ಮತ್ತು ಶಿವನ ಭಕ್ತವಾತ್ಸಲ್ಯ ವ್ಯಕ್ತವಾಗುತ್ತದೆ.

ಹರಿಹರ ಲೋಕದ ಸಂಗತಿಗಳನ್ನು ಬಾಹ್ಯಘಟನೆಗಳನ್ನು ಚಿತ್ರಿಸುವುದರ ಜೊತೆಗೆ ಮಾನವ ಚಿತ್ತವೃತ್ತಿಯಂತಹ ಸೂಕ್ಷ್ಮಾತಿಸೂಕ್ಷ್ಮ ವಿಚಾರಗಳನ್ನು ಯಶಸ್ವಿಯಾಗಿ ಚಿತ್ರಿಸಿದ್ದಾನೆ. ತೆಲುಗುಜೊಮ್ಮಿತಂದೆ ಶಿವನಿಂದೆ ಮಾಡಿದ ವಿಷ್ಣುಪುರಾಣದ ಭಟ್ಟನನ್ನು ಕೊಂದ ಬಗ್ಗೆ ಪೆರ್ಮಾಡಿರಾಯ ಸೇವಕರನ್ನು ಕೇಳುತ್ತಾನೆ. ಅಂಜಿದ ಅವರ ಬಾಯಿಯಲ್ಲಿ ಮಾತೇ ಹೊರಡುವುದಿಲ್ಲ. 'ಜೊಮ್ಮಿತಂದೆಗಳ್ ಕೊಂದರೆಂದು ಪೇಳಲಂಜಿ ಕೈಸನ್ನೆಯಿಂ ಬಾಯಿಸನ್ನೆಯಿಂ' (೨೮) ತೋರಿಸುತ್ತಾರೆ. ಸಂಗತಿಯನ್ನು ಅರ್ಥಮಾಡಿಕೊಂಡ ದೊರೆ ಮುಂದೆ ಬಂದು ಸತ್ತ ಬ್ರಾಹ್ಮಣನನ್ನು ಕಂಡು 'ಮುಖದ ಕೈಯಿಂ ಮನದ ಕೌತುಕದಿಂ ಚಿತ್ತದ ನಿರೋಧದಿಂ ತಲೆದೂಗುತ್ತೆ ಪೆರ್ಮಾಡಿರಾಯಂ ಸಿಂಹಾಸನಾರೂಢನುಂ ಕೋಪಾರೂಢನುಮಾಗಿ ...ಕೆಂಪಡರ್ದ ಕಂಗಳಿಂ ಕೆತ್ತುವ ಮಿಾಸೆಯಿಂ ಚಿತ್ತದ ಕ್ಷೋಭೆಯಿಂ ಮನದ ಕಡುಗೋಪದಿಂ' (೨೯) ಜೊಮ್ಮಣ್ಣನನ್ನು ಕರೆಯಲು ಮತ್ತೆ ಮತ್ತೆ ಪಡಿಯರರನ್ನು ಕಳಿಸುತ್ತಾನೆ. ಇಂತಹುದೇ ಮತ್ತೊಂದು ಒಳ್ಳೆಯ ನಿದರ್ಶನ ಕೇಶಿರಾಜ ದಣ್ಣಾಯಕರು ಶಿವಪೂಜೆ ಮಾಡುವಾಗ ಕಂಡುಬರುತ್ತದೆ. ಆರೋಗಣೆಗೆ ಜೊಮ್ಮಣ್ಣನರಸಿ

ಮನೆಯಲ್ಲಿ ಮಾಡಿದ್ದ ಮಾಂಸದ ಅಡುಗೆಯನ್ನು ಎಡೆಮಾಡುತ್ತಿದ್ದರೆ ಕೇಶಿರಾಜ ದಣ್ಣಾಯಕರು—

'ಸುಮ್ಮಾನ ಉಡುಗಿದಣ್ಣಾಯಕರ್ ನಡುಗುತಿರೆ
ಸೋಮನಾಥನನೊಮ್ಮೆ ಬಡಿಸುತಿರ್ಪರನೊಮ್ಮೆ
ಭೀಮನಾಥನನೊಮ್ಮೆ ಜೊಮ್ಮಣ್ಣನುಮನೊಮ್ಮೆ
ನೋಡುತಂ ದಣ್ಣಾಯಕರ್ ಕರಗಿಕೊರಗುತಂ
ಬಾಡುತಂ ನುಡಿಯಲಮ್ಮದೆ ಕಂದಿಕುಂದುತಂ'

ಇರೆ ಜೊಮ್ಮಿತಂದೆ ಎಲ್ಲವನ್ನೂ ಅರಿತು ನಸುನಗುತ್ತ ಪಲಲವನ್ನು ಪಕ್ವಾನ್ನತತಿಯಾಗಿ ಮಾಡುತ್ತಾರೆ. ಹೀಗೆ ಹಲವಾರು ಚಿತ್ರಣಗಳು ಹರಿಹರನ ರಗಳೆಗಳಲ್ಲಿ ಕಂಡು ಬರುತ್ತವೆ.

ಹರಿಹರನ ರಗಳೆಗಳಲ್ಲಿ ವರ್ಣನೆಗಳಿವೆ. ಆದರೆ ಅವು ಕೇವಲ ವರ್ಣನೆಗಳಿಗಾಗಿ ಬಂದಿಲ್ಲ. ಅವನ ಕೃತಿಗಳಲ್ಲಿ ಬರುವ ವರ್ಣನೆಗಳು ಕಥೆಯ ಓಟಕ್ಕೆ ಧಕ್ಕೆ ತಾರದೆ ಸಂದರ್ಭಕ್ಕೆ ಪರಿಪುಷ್ಟವಾಗುವಂತೆ ಬಂದಿವೆ. ತೆಲುಗು ಜೊಮ್ಮಯ್ಯಗಳ ರಗಳೆಯಲ್ಲಿ ಬರುವ ಕಾರಣಿಕ ಮೃಗಗಳ ವರ್ಣನೆ, ಸುರಗಿಯ ಚೌಡಯ್ಯ ಮತ್ತು ಬಾಹೂರ ಬೊಮ್ಮಯ್ಯಗಳ ರಗಳೆಯಲ್ಲಿ ಬರುವ ವೃಷಭಗಳ ವರ್ಣನೆ, ಪೆರ್ಮಾಡಿರಾಯನ ಮದಿಸಿದ ಆನೆಯ ವರ್ಣನೆ ಈ ಮಾತಿಗೆ ನಿದರ್ಶನಗಳು. ಪ್ರಕೃತಿಗೆ ಚೇತನಾರೋಪಣವನ್ನು ಮಾಡುವುದು ಹರಿಹರನ ಮತ್ತೊಂದು ವೈಶಿಷ್ಟ್ಯ. ಹರಿಹರನ ಪ್ರಕಾರ ಸೂರ್ಯೋದಯ ವಾಗುವುದು ಶಿವಕಾರ್ಯವನ್ನು ನೋಡುವುದಕ್ಕೆ, ಶಿವಮಹಿಮೆಯನ್ನು ಕಾಣುವುದಕ್ಕೆ. ಉದಾಹರಣೆಗೆ—'ನಂದೀಶ್ವರಂ ಕರ್ಬನಾರ್ಪೆಸುವಂದಮಂ' ಇಂದು ನೋಡುವೆನಿಳೆಗೆ ಪೊಸತೆನಿಪ ಛಂದಮಂ ಎಂಬಂತೆ ರವಿಯುದಯ' (೬೧) ವಾಗುತ್ತದೆ. ಅನುಕ್ರಮವಾಗಿ ಬರುವ ಸೋಮವಾರ 'ಪನ್ನಗಧರಂ ನಿನ್ನಂ ಮೆಚ್ಚಿದಪಂ ಬನ್ನಿಮೆಂದತ್ಯಾದರದಿಂ ಕರೆವಂತೆ' (೫೧) ಹರಿಹರನಿಗೆ ಕಾಣುತ್ತದೆ.

ಒಳ್ಳೆಯ ಕವಿಗಿರಬೇಕಾದ ಸಮಕಾಲೀನ ಪ್ರಜ್ಞೆ ಹರಿಹರನಲ್ಲಿ ಚೆನ್ನಾಗಿ ಕಂಡುಬರುತ್ತದೆ. ಅಂದಿನ ಸಮಾಜದ ಪ್ರಧಾನ ಅಂಶವಾದ ವೀರಶೈವ ಮತ್ತು ಜೈನಧರ್ಮದ ಘರ್ಷಣೆ ಈ ಸಂಕಲನದ ರಗಳೆಗಳ ಮುಖ್ಯವಸ್ತು. ಬಾಹೂರ ಬೊಮ್ಮಯ್ಯ ಬರುವಾಗ ಜೋಳದ ರಾಶಿಯನ್ನು ಹಾಕಿಕೊಂಡು ವ್ಯಾಪಾರಿಯೊಬ್ಬನ 'ಶಂಕರಗಂಡಸಂ ಕೊಳ್ಳಿರೇ' (೪೭) ಎನ್ನುವ ಮಾತಿನಿಂದ ಅಂದು ಜೋಳಕ್ಕಿದ್ದ ಮತ್ತೊಂದು ಹೆಸರು ತಿಳಿದುಬರುತ್ತದೆ. ಮುಸುಟೆಯ ಚೌಡಯ್ಯ ಊರಿಗೆ ಬರುವಾಗ ದಾರಿಯಲ್ಲಿ ಕಂಡುಬಂದ ಕೇಳಿಕೆ (೧೨) ಯಿಂದ ಅಂದಿನ ಕಾಲದ ಶವಸಂಸ್ಕಾರದ ಸಂದರ್ಭದಲ್ಲಿ ನಡೆಯುವ ಮೆರವಣಿಗೆಯ ಚಿತ್ರ ಸಿಗುತ್ತದೆ. ಇದರ ಜೊತೆಗೆ ಮಕ್ಕಳು ಆಡುತ್ತಿದ್ದ 'ಚಿಟ್ಟುಮುರಿಯಾಟ' (೧೪) ಮುಂತಾದ ಹಲವಾರು ಸಂಗತಿಗಳನ್ನು ಗಮನಿಸಬಹುದು.

ಆಡುನುಡಿಯನ್ನು, ದೇಸೀಯ ನುಡಿಗಟ್ಟನ್ನು ಹರಿಹರ ಚೆನ್ನಾಗಿ ಬಳಸಿಕೊಂಡಿರುವುದನ್ನು ನಾವು ಜೊಮ್ಮಣ್ಣ ಮತ್ತು ಕೇಶಿರಾಜದಣ್ಣಾಯಕರ ಪ್ರಸಂಗದಲ್ಲಿ ಕಾಣಬಹುದು. ಜೊಮ್ಮಣ್ಣನ ಕೀರ್ತಿಯನ್ನು ಕೇಳಿ ಆತನನ್ನು ನೋಡಲು ಬಂದು ಪಲ್ಲಕ್ಕಿಯಿಂದಿಳಿದು ಜೊಮ್ಮಣ್ಣನ ಮನೆಯ ಒಳಗಡೆಗೆ ಹೋಗುತ್ತ ‘ಜೊಮ್ಮಣ್ಣನೆಲ್ಲಿಗೆ ಹೋದ ಇಂದುಧರನ ಪ್ರತಾಪಾಗ್ನಿ ಎಲ್ಲಿಗೆ ಹೋದ’ ಎಂದು ಕೇಳುತ್ತ ಮನೆಯ ಒಳಗೆ ಹೋಗಿ ಪಿಶಿತಮಾಲೆಯನ್ನು ಕಂಡು ಹೇಸಿ ಊರ ಮುಂದಿನ ಶಿವಾಲಯಕ್ಕೆ ಹೋದನು. ಇತ್ತ ಜೊಮ್ಮಣ್ಣ ಬೇಟೆಯನ್ನು ಮುಗಿಸಿ ಮನೆಗೆ ಬಂದು ‘ಬಂದರುಂಟೇ ಶಿವನ ಭಕ್ತರಱಸುತಲಿಂದು, ಎಂದು ತನ್ನರಸಿಯರನೆಂದಿನಂದದಿ’ ಕೇಳುತ್ತಾನೆ. ಆಕೆ ನಡೆದ ಸಂಗತಿಯನ್ನು ತಿಳಿಸಲು ಜೊಮ್ಮಣ್ಣ ಶಿವಾಲಯಕ್ಕೆ ಬಂದು ದಣ್ಣಾಯಕರನ್ನು ಕಂಡು ‘ಎನ್ನ ಮನೆಯಿರ್ದಂತೆ ಇಲ್ಲಿ ನೀವಿರ್ಸಿರೇ’ ಎನ್ನುತ್ತಾನೆ. ಅದಕ್ಕೆ ದಣ್ಣಾಯಕರು ‘ಸೋಮಧರನಾಪರನು ಪೂಜೆಗಳನೊಳಕೊಂಡು ಇರ್ದಪನಿದಕ್ಕೇನ ಮಾಡುವಂ’ ಎನ್ನುತ್ತಾರೆ. ಹೀಗೆ ಹಲವಾರು ಪ್ರಸಂಗಗಳು ಪ್ರಸ್ತುತ ಸಂಕಲನದಲ್ಲಿ ದೊರೆಯುತ್ತವೆ.

ಹರಿಹರನ ರಗಳೆಗಳಲ್ಲಿ ಅಲಂಕಾರಗಳು ಎಡೆಪಡೆದುಕೊಂಡಿವೆ. ಅವುಗಳಲ್ಲಿ ಮುಖ್ಯವಾದುವು ರೂಪಕ, ಉಪಮೆ, ಉತ್ಪ್ರೇಕ್ಷೆಗಳು. ಅವುಗಳಿಗೆ ಮಹಾಕವಿ ಪ್ರತಿಭೆಯ ಔಚಿತ್ಯವಿರುವುದರಿಂದ ಅವು ತಮ್ಮ ನಿರ್ದೇಶಿತ ಗುರಿಯನ್ನು ಯಶಸ್ವಿಯಾಗಿ ಮುಟ್ಟುತ್ತವೆ. ಹರಿಹರನ ಭಕ್ತರು ‘ಉರಿಯಂತೆ ಸಿಡಿಲಂತೆ ಶಿವದೂಷಕಾವಳಿಗೆ, ಸಿರಿಯಂತೆ ಸುಖದಂತೆ ಹರನ ಶರಣಾವಳಿಗೆ’ ಕಂಡುಬರುತ್ತಾರೆ. ಹರಿಹರನ ಶಕ್ತಿಪೂರ್ಣ ಆಲಂಕಾರಿಕ ಅಭಿವ್ಯಕ್ತಿಗೆ ಬಾಹೂರ ಬೊಮ್ಮಯ್ಯ ಕಲ್ಲುನಂದಿಗೆ ಕಬ್ಬನ್ನು ತಿನ್ನಿಸುವ ಸಂದರ್ಭದಲ್ಲಿ ಎತ್ತನ್ನು ವರ್ಣಿಸುವಾಗ ‘ಹೊಳೆವ ಚಂದ್ರಿಕೆಗೆ ಕೈಕಾಲ್ಮೊಗಂ ಮೂಡಿತೋ’[1] ಎನ್ನುವ ಮಾತು ನಿಲ್ಲುತ್ತದೆ. ಜನಜೀವನದಲ್ಲಿ ಬೆಳದಿಂಗಳು ತರಬಹುದಾದ ಪ್ರಶಾಂತತೆ ಉಲ್ಲಾಸಗಳು ಸರ್ವವಿದಿತ. ಅಂತೆಯೇ ಕಲ್ಲುಬಸವ ಚೇತನಗೊಂಡು ಬಂದುದರಿಂದ ಧಾರ್ಮಿಕ ಘರ್ಷಣೆಯ ಕಿರಿಕಿರಿಗೆ ಒಳಗಾಗಿದ್ದ ಶರಣಾವಳಿಯಲ್ಲಿ ಉಂಟಾಗುವ ಮಾನಸಿಕ ಶಾಂತಿ ಮತ್ತು ಉಲ್ಲಾಸವನ್ನು ಈ ಮಾತು ಬಹಳ ಸಮರ್ಥವಾಗಿ ಸೂಚಿಸುತ್ತದೆ. ಹೀಗೆಯೇ ಸುರಗಿಯ ಚೌಡಯ್ಯನಿಗೆ ಶಿವದರ್ಶನವಾಗದಿದ್ದಾಗ ಅವನಿಗೆ ‘ಕಂಗೆ ಮುಳ್ಳಿಡ್ಡವಾದಂತೆ’ ಸಂಕಟವಾಗುತ್ತದೆ. ಕೇಶಿರಾಜ ದಣ್ಣಾಯಕ ತನ್ನ ಮನೆಗೆ ಬರಲು ನಿರಾಕರಿಸಿದಾಗ ತೆಲುಗು ಜೊಮ್ಮಯ್ಯ ‘ಪೊಸೆದ ಪೂವಿನ ತೆಱವೆ’ ಆಗುತ್ತಾನೆ. ಹೀಗೆ ಅರ್ಥಪೂರ್ಣವಾಗಿ ಹೊಂದಿಕೊಂಡ ಅನೇಕ ಅಲಂಕಾರಗಳು ದೊರೆಯುತ್ತವೆ.

---

[1] ಕುಮಾರವ್ಯಾಸನ ಭಗದತ್ತನ ಆನೆಯ ವರ್ಣನೆ ‘ಕೈಕಾಲ್ ಮೂಡಿತೋ ನಭಕೆ’ ಎನ್ನುವ ಮಾತಿನೊಡನೆ ಈ ಮಾತನ್ನು ಹೋಲಿಸಬಹುದು.

ಒಟ್ಟಿನಲ್ಲಿ ಯಾವ ದೃಷ್ಟಿಕೋನದಿಂದ ಪರಿಶೀಲಿಸಿದರೂ ಹರಿಹರ ಕನ್ನಡ ಸಾಹಿತ್ಯದ ಮಹಾಕವಿಯಾಗಿ ನಿಲ್ಲುತ್ತಾನೆ. ಆತ ತನ್ನ ಸಮಕಾಲೀನ ಕವಿ ಜೀವನದ ಕ್ರಾಂತಿ ಕಾರಿಯಾಗಿದ್ದಾನೆ. ಮಹಾಭಕ್ತನಾಗಿ ಮೆರೆದಿದ್ದಾನೆ. ತನ್ನ ಅನಂತರದ ಕವಿಗಳಿಗೆ ಸ್ಫೂರ್ತಿಯಾಗಿ ಮಾದರಿಯಾಗಿ ಅವರ ಕೃತಿಗಳ ವಸ್ತುವಿಗೆ ಆಕರ'ವಾಗಿ ನಿಂತಿದ್ದಾನೆ. "ಜೈನ ಕವಿಗಳಲ್ಲಿ ಪಂಪನಿಗೆ ಯಾವ ಮರ್ಯಾದೆ ಇದೆಯೋ ಅದೇ ಮನ್ನಣೆ ವೀರಶೈವ ಕವಿಗಳಲ್ಲಿ ಹರಿಹರನಿಗೆ ಸಂದಿದೆ. ಅವನ ಅನಂತರ ಬಂದ ಅನೇಕ ಶಿವಕವಿಗಳು ಅವನ ಪಾದಕ್ಕೆ ಒಂದು ಹೂವನ್ನು ಹಾಕಿ ನಮಸ್ಕಾರ ಮಾಡಿದ ಹೊರತು ಕಾವ್ಯರಚನೆಗೆ ಕೈಹಾಕರು. ಇದಕ್ಕೆ ಕಾರಣ ಅವನು ಶಿವಕವಿಯಾಗಿರುವುದೊಂದೇ ಅಲ್ಲ, ಅವನ ಕವಿತೆಯ ಮಾರ್ಗ ರಸಸ್ಯಂದಿಯಾಗಿಯೂ ಇರುವುದು"[2]. ಷಡಕ್ಷರದೇವ ಹೇಳುವ "ಹರಿದೇವಂ ದೇವದೇವೋತ್ತಮನ ಶರಣರಂ ಪಾಡಿ ಕೈವಲ್ಯಲಕ್ಷ್ಮೀವರನಾದಂ ಮತ್ತ ವಂಗತ್ಯಧಿಕ ಶಿವಕವೀಂದ್ರಂಗದಾರ್ ಸಾಟಿಯಪ್ಪರ್" ಎನ್ನುವ ಮಾತು ಹರಿಹರನಿಗೆ ಸಮರ್ಥ ಕವಿಯೊಬ್ಬ ನೀಡುವ ಅತ್ಯುಚ್ಚ ಪ್ರಶಸ್ತಿ. ಈ ಪ್ರಶಸ್ತಿಗೆ ಅರ್ಥಪೂರ್ಣ ಅಭಿ ವ್ಯಕ್ತಿಯಾಗಿ ನಿಲ್ಲುವುದೇ ಹರಿಹರನ ವೈಶಿಷ್ಟ್ಯ.

iv ಹಸ್ತಪ್ರತಿಗಳ ವಿವರ

ಪ್ರಕೃತ ಸಂಕಲನವನ್ನು ಎರಡು ಹಸ್ತಪ್ರತಿಗಳು ಮತ್ತು ಡಾ|| ಫ. ಗು. ಹಳಕಟ್ಟಿ ಯವರ ಅಚ್ಚಿನ ಪುಸ್ತಕದ ಸಹಾಯದಿಂದ ಸಂಪಾದಿಸಿದೆ. ಸಂಪಾದನೆಗಾಗಿ ಬಳಸಿಕೊಂಡ ಹಸ್ತಪ್ರತಿಗಳ ವಿವರ ಹೀಗಿದೆ—

'ಕ' ಇದು ಕನ್ನಡ ಅಧ್ಯಯನ ಸಂಸ್ಥೆಯ K. 358ನೆಯ ಸಂಖ್ಯೆಯ ತಾಳೆಗರಿ ಪ್ರತಿ. ಈ ಕಟ್ಟಿನಲ್ಲಿ ಒಟ್ಟು 231 ಗರಿಗಳಿದ್ದು ಸುಮಾರು 97 ರಗಳೆಗಳಿವೆ. ಇದರ ಉದ್ದ 12·4"ಅಗಲ 1 8". ಓಲೆಯ ಪ್ರತಿಯೊಂದು ಕಡೆಯೂ ಸು. 12 ಪಂಕ್ತಿಗಳು ಮತ್ತು ಸು. 85 ಅಕ್ಷರಗಳಿವೆ. ಶಕಟರೇಫದ ಬಳಕೆಯಿದೆ. 86ನೆಯ ಪತ್ರದಲ್ಲಿ ಸುರಗಿಯ ಚೌಡಯ್ಯ ಗಳ ರಗಳೆ, 89 ನೆಯ ಪತ್ರದಲ್ಲಿ ಮುಸುಟೆಚೌಡಯ್ಯಗಳ ರಗಳೆ, 110 ನೆಯ ಪತ್ರದಲ್ಲಿ ತೆಲುಗಜೊಮ್ಮಣ್ಣಗಳ ರಗಳೆ, 173 ನೆಯ ಪತ್ರದಲ್ಲಿ ಕೋವೂರಬೊಮ್ಮಯ್ಯಗಳ ರಗಳೆ, 180 ನೆಯ ಪತ್ರದಲ್ಲಿ ಬಾಹೂರಬೊಮ್ಮಯ್ಯಗಳ ರಗಳೆಗಳಿವೆ. ಈ ಪ್ರತಿ ಸಾಕಷ್ಟು ಹಳೆಯದಿದ್ದು ಶುದ್ಧವಾಗಿದೆ. ಅಕ್ಷರಗಳು ಸ್ಫುಟವಾಗಿವೆ. ಇದರಿಂದ ಮುದ್ರಣ ಪ್ರತಿ ಯನ್ನು ತಯಾರಿಸಿದೆ.

---

[1] ಮಹಾದೇವಿಯಕ್ಕನ ಪುರಾಣ ಮತ್ತು ರೇವಣಸಿದ್ಧೇಶ್ವರ ಪುರಾಣಗಳು.

[2] ಹಂಪೆಯ ಹರಿಹರ_ಡಾ. ಡಿ. ಎಲ್. ನರಸಿಂಹಾಚಾರ್

'ಚ' ಇದು ಕನ್ನಡ ಅಧ್ಯಯನ ಸಂಸ್ಥೆಯ N. 132 ಸಂಖ್ಯೆಯ ಮೈಕ್ರೋಫಿಲ ಪ್ರತಿ. ತುಂಬಾಪೂರದ ಕಲ್ಲಿನಾಥಶಾಸ್ತ್ರಿಗಳು ಪ್ರತಿಮಾಡಿದ ಕಾಗದದ ಪ್ರತಿಯಿಂದ ಈ ಮೈಕ್ರೋಫಿಲಂ ಪ್ರತಿಯನ್ನು ತೆಗೆಯಲಾಗಿದೆ. ಇದರಲ್ಲಿ 154 ಪತ್ರಗಳಿವೆ. ಪ್ರತಿಪತ್ರ ದಲ್ಲಿಯೂ ಸು. 32 ಪಂಕ್ತಿಗಳು ಮತ್ತು ಸು. 40 ಅಕ್ಷರಗಳು ಇವೆ. 92 ನೆಯ ಪುಟದಲ್ಲಿ ಮುಸುಟೆ ಚೌಡಯ್ಯ ಕಥನಂ ಪುಟ 102 ರಲ್ಲಿ ಸುರಗಿ ಚೌಡಯ್ಯ ಕಥನಂ ಪುಟ 128ರಲ್ಲಿ ಬಾಹೂರು ಬೊಮ್ಮಯ್ಯ ಕಥನಂ ಪುಟ 130ರಲ್ಲಿ ಕೋವೂರು ಬೊಮ್ಮಯ್ಯ ಕಥನಂ ಪುಟ 142ರಲ್ಲಿ ತೆಲುಗು ಜೊಮ್ಮಯ್ಯ ಕಥನಂಗಳಿವೆ. ಈ ಪ್ರತಿ ಈಚಿನಕಾಲದ್ದು 'ಕ' ಪ್ರತಿಯಷ್ಟು ಶುದ್ಧವಲ್ಲ.

'ಪ' ಡಾ. ಫ. ಗು. ಹಳಕಟ್ಟಿಯವರು ಅಚ್ಚುಹಾಕಿಸಿರುವ ಹರಿಹರನ ರಗಳೆಗಳು (1968) ಎಂಬ ಪುಸ್ತಕ. ಇದರಲ್ಲಿ ಪ್ರಸಕ್ತ ಸಂಕಲನದ ಬಾಹೂರು ಬೊಮ್ಮಯ್ಯ ಮತ್ತು ತೆಲುಗು ಜೊಮ್ಮಯ್ಯನ ರಗಳೆಗಳಿಗೆ ಪಾಠಾಂತರ ಸಂಕಲನ ಮಾಡಿದೆ.

ಎಂ. ಎಸ್. ಲೀಲಾವತಿ.

ಐದು ರಗಳೆಗಳು

೧. ಸುರಗಿಯ ಚೌಪದ್ಯಗಳ ರಗಳೆ

[illegible]

[illegible]

[illegible]

ಭರದ ಮೊನೆಮುಱಿಂದು ಕಾಣದೆ ಕಂದಿ ಕುಂದುತಂ
ಹರಹರ ನಮ[1][ಶ್ಶಿವಾಯೆಂದೆಂದು][1] ಕೊರಗುತಂ
ಶಿವನನೀಕ್ಷಿಸುವ ನಯನಕ್ಕೆ ಮಱಿಕೆಯಾಗುತಿರೆ
[2]ಭ[2]ವನ ನೋಟಕ್ಕೆ ನಡುವಡ್ಡ[3]ಮಾ[3]ಗುತ್ತಮಿರೆ
ಬಾಗಿಯಂತಿಂತೊಲೆದು ಕುಗ್ಗಿ ಮಿಗೆನೋಡುತುಂ
ತೂಗಿ ಕುಸಿದೆದ್ದು ಕು[4]ಳ್ಳಿರ್ದು ಮಿಗೆ[4]ನೋಡುತುಂ
ಕಂಗೆ ಮಱಿಕೆ ತನ್ನಯ ಮನದ ಕಂಗೆ ಮಱಿಕೆಯಾಗೆ
ಕಂಗೆ ಮುಳ್ಳಡ್ಡ[5]ವಾ[5]ದಂತೆ ಸಂಕಟ[6]ವಾ[6]ಗೆ
ಮತ್ತೆ ಮತ್ತಡಿಗಡಿಗೆ ಪೊಡಮಡಲು [7]ನೆನೆವುತಿರೆ[7]
ಎತ್ತಲುಂ ತನ್ನ ನೋಟಕ್ಕೆ ತೆಱಿಹಿಲ್ಲದಿರೆ
ಸುಯ್ದು ಸಿಗ್ಗಾಗಿ ಕಡುಚಿಂತೆಯಿಂ ನೋ[8]ಡುತುಂ[8]
ಎಯ್ದೆ [9]ಕೈಯೊಳಗಿರ್ದರಳ್ಗಳುಂ[9] ಬಾಡುತುಂ
ಎಂತಕ್ಕೆ ಮಧ್ಯಾಹ್ನ ಸಮಯದೊಳ್ ತೆಱಿಹಾಗೆ
ಚಿಂತಿಸು[10]ತ್ತಳಲುತಂ[10] ಕಣ್ಣನೀರ್ ಕಡಲಾಗೆ
ಏನಯ್ಯ ತೆಱಿಹುಗುಡದಿ[11]ರ್ಪರೇ[11] ಶಂಕರಾ
ನಾನಾ ನಿರೋಧದೊಳಗಿರಿಸುವರೆ ಶಶಿಧರಾ
ನೋಡದಿಂತಿರ್ಪೆನೆನ್ನಯ ಕಣ್ಣ ಪುಣ್ಯವೇ
ನೋಡುವಡೆ ಸುರರೆಣಿಸಲರಿದೆನಿಪಗಣ್ಯವೇ
ತವನಿಧಿಯೆ ಮಹನಿಧಿಯೆ ಸರ್ವಸಿಧಿಗಳ ಸಿಧಿಯೆ
ಭುವನ ಭವನ ಪ್ರಕಾಶಿತ ನೂತ್ನದೀಧಿತಿಯೆ
ತತ್ವಮಯ ಶಾಂತಮಯ ನಿತ್ಯಮಯ ಶಂಭುವೇ
ಸತ್ವರಜ[12]ತಾಮಸಗುಣೋ[12]ರಹಿತ [13]ನಿತ್ಯ[13]ವೇ
ಕಾಣದಿರ್ದಡೆ ನಿಮಿಷಯೆನಗೆ ಶತಯುಗವಾಯ್ತು
ಕಾಣದಿರ್ದಡೆ ಕಣ್ಗೆ ಕತ್ತಲೆಯಮಯವಾಯ್ತು
ನೋಡದಿರಲಾಱೆನಿನ್ನೆಂತು ಮಾಡುವೆನಯ್ಯ
ನೋಡುವಡೆ[14]ನಗೆ ಜೇವ ಮಱಿಕೆಮಾಡಬೇಡಯ್ಯ[14]

---

[1] ಶಿವಾಯಮೆಂದೆಂದು (ಕ) ಶಿವಾಯಯೆಂದು (ಚ) [2] ಶಿ (ಚ) [3] ಆ (ಚ) [4] ಳಿದ್ದಿರ್ದು (ಕ) [5] ಮಾ (ಚ) [6] ಮಾ (ಚ) [7] ನೆರೆಬರಲು (ಚ) [8] ಡುತಂ (ಚ) [9] ಕೈಸಾರ್ಚಿರ್ದಿತ ಲೊಡನೊಡನೆ (ಚ) [10] ತ್ತೆ ಬಳಲುತ್ತೆ (ಕ) [11] ರ್ದಪರಿ (ಚ) [12] ತಮಸನೋಗುಣ (ಕ) [13] ಲಿಂಗ (ಚ) [14] ನೀನೀಯೆಯೆಂತು ಜೀವಿಪೆನಯ್ಯ (ಕ)

ದಿಟ್ಟನುಡಿಯ ಮಹಿಮ ಕೇ[1]ಳೆಂದು[1] ಮೊದಲಾಗಿ
ದಿಟ್ಟವಾರಿಯ ನೇಮದಿರವನೊಚ್ಚತವಾಗಿ
ಕೈಕೊಂಡೆನಿದುನೇಮವಿದುನೇಮವಿನ್ನೆನಗೆ
ಲೋಕೈಕಬಂಧುವೇ [2]ನಡೆಯಿ[2]ಸುವುದಿದನೆನಗೆ
ಎನ್ನ ನೋಟದ ನಡುವೆ ನಿನಗಡ್ಡವಾದವಂ
ನಿನ್ನಾಣೆ ತೀ[3]ರ್ಚಲಗಿನಿಂ[3] ಕಳವೆನನ್ಯರಂ
ಎಂದಲ್ಲಿ ಮೆಯ್ಯಿಕ್ಕಿ ನಿತ್ಯನೇಮಂ ಮಾಡಿ
ಇಂದುಧರನೊಡನೆ ಕಡುಸಲಿಗೆಯಿಂ ಮಾತಾಡಿ
ನಡೆತಂದು ಶಿವ[4]ನಲ್ಲಿ ಕಡು[4]ನಿಷ್ಠೆಯಂ ಪಡೆದು
ಮೃಡನಣುಗ[5]ನೊಂದು ಸುರಗಿಯನಳವಡಲ್[5] ಪಿಡಿದು
ದಿಟ್ಟವಾರಿಯ ನೇಮ[6]ಮಂ[6] ತಪ್ಪದೊಪ್ಪುತಂ
ನಿಷ್ಠೆಗೀಶ್ವರನೊಲಿದು ಕೌತುಕವನಪ್ಪುತಂ
[7]ಕಲಿ[7]ನಿಷ್ಠೆವಂತನಭಿಮಾನಿ ನಿಚ್ಚಳನೆಂದು
ಕೆಲಬಲಕೆ ಸಾರ್ವ[8]ನಲ್ಲು[8]ಬ್ಬಟೆಯ ಛಲಿಯೆಂದು
ಸುರಗಿಯ ಚವುಂಡರಾಯಂ ಬರ್ಪ [9]ಹೊತ್ತಿನೊಳ್[9]
ಹರನಾರುಮಂ ಹೊದ್ದಲೀಯನಾ [9]ಹೊತ್ತಿನೊಳ್[9]
ಹೂವನೊಳಗಾಗಿ ಮಱೆಮಾಡಿಕೊಂಡಿರಲಮ್ಮ
[10]ಆವುದುಂ ಅಡ್ಡಲಾಗಿರಿಸಿಕೊಂಡಿ[10]ರಲ[11]ಮ್ಮ[11]

ಇಂತು ಶಿವನಂಜುತಿರೆ ನೇಮ[12]ವದು ನಡೆವು[12]ತಿರೆ
ಸಂತತಂ ಶಿವಭಕ್ತಿಮಿಕ್ಕು ಕಳೆಯೇಱುತಿರೆ
ಒಂದುದಿವಸಂ ಶಂಕರಂ ಬಂದು ಕನಸಿನೊಳು
ನಿಂದು ಚಾವುಂಡರಾಯಂಗೆ [13]ನಿಜಭಾವದೊಳು[13]
ಹಸಿದೆ[14]ನೆಲೆ[14] ಮಗನೆ ಹಸಿದೆಂ ಕಂದ ಕೇಳೆಂದು
ಬೆಸಸಿ ಭಾಳಾಂಬಕಂ ಪೋಗೆ ಹರುಷದೊಳಂದು
ಎಚ್ಚತ್ತು ಕಂಡೆಱಿದು ಪುಳಕಮಂ ಸಂತೈಸಿ
[15]ಮು[15]ಚ್ಚಿ ನೆಱೆ[16]ನ[16]ಚ್ಚಿ ಕನ[17]ಸಂ[17] ಮನಸಿನೊಳ್ ಸಿಲಿಸಿ

1 ಳ್ನಾಳೆ (ಕ) 2 ಕರುಣಿ (ಕ) 3 ರ್ಚಿ ತೊಲಗಿಸಿ (ಕ) 4 ನಿಳಯದೊಳು (ಚ) 5 ನಳವಡಲು ಸುರಗಿಯೊಂದು (ಚ) 6 ವುಂ (ಕ) 7 ಸಲೆ (ಚ) 8 ನೆನಲು (ಚ) 9 ಸಮಯದೊಳು (ಚ) 10 ನಾವುದಮನಡ್ಡಲಾಗಿಡಿಸಿಮರದಿ (ಕ) 11 ಮ್ಮ ಬರುತಿರುವ ಸಮಯದಲಿ ತೆರೆಸರಿವುದೊಂದೆಸೆಗೆ। ಹರಹರ ನಮಃ ಶಿವಾಯೇನೆಂಜನಿ ಧರೆಗೆ (ಚ) 12 ಮಂ ನಡೆಸು (ಚ) 13 ನೆಱೆ ನಲವಿನೊಳ್ (ಕ) 14 ನ್ನೈ (ಚ) 15 ನ (ಚ) 16 ಮ (ಚ) 17 ಸು (ಚ)

ಇಂತು ನಿಚ್ಚಂ ಹೆಚ್ಚಿ ಹಾರೈಸಲಿಕ್ಕುತಂ
ಕಂತುಮದಮರ್ದನನ ಭಕ್ತಿಯೊ[1]ಳ್ ನಲಿವುತಂ[1]
ಹರನ ಶರಣರ್ಗೆ ಬೇಡಿತನಿತ್ತು ತಣಿ[2]ವು[2]ತಂ
ಸುರಗಿಯ [3]ಚವುಂ[3]ಡರಾ[4]ಯಂ[4] ಸುಖದೊಳೊಪ್ಪು[5]ತಂ[5]
ಇರುತಿ[6]ರುತ[6] ಒಂದುದಿನ ಉದಯಸಮಯದೊ[7]ಳೆದ್ದು[7]
ಹರನ ನೇವ[8]ಕ್ಕೆ ಬರಲೆಂದು[8] ಹರುಷಂ [9]ತಾ[9]ಳ್ದು
ಬಂದು ಕೊಂಡದೊಳಂದು ಶುದ್ಧಾಂಗನಾಗು[10]ತಂ[10]
ಸಂದಣಿಪ [11]ಪೂ[11]ದೋಂಟದೊಳಗೆ ಪೂಗೊಯ್ಯು[12]ತಂ[12]*
ಬಂದು ಕೊಂಡದ [13]ಬಳಿಯಲೊಪ್ಪಿದಂ[13] ಕಾಲ್ದೊಳೆದು
ನಿಂದು ಭಸಿತಮನಾಗಮಸ್ಥಾನದೊಳ್ ತಳೆದು
ಬಾಹುಬಳೆ ಕಂಠ[14]ದೊಳು ರುದ್ರಾಕ್ಷಿಗಳನಿ[14]ಕ್ಕಿ
ಸಾಹಸಾಭರಣನು[15]ತ್ಸಾಹ[15]ದೊಳ್ ಕೈಮಿಕ್ಕು
ಸುರಗಿಯಂ ತಿರುಪಿ ಜಂ[16]ಘೆಗಳ[16] ನೀಡಾಡು[17]ತುಂ[17]
ತರಹರಿಸಿ ಕೊ[18]ರ್ಮೆಯೊಳು[18] ನಿಂದು ಪುಟವೇ[19]ಳು[19]ತುಂ
ಬರು[20]ತ[ವಿ]ರಲತ್ತಲಿತ್ತಲ್[20] ಶಿವಾಲಯದೊಳಗೆ
ಹರನೊಳಗೆ ನೇಮ[21]ವಂ[21] ಮಾಡಲೆಂದೊ[22]ಳ[22]ಗೆ ಮಿಗೆ
ಅಱಿಯದೆ ಹೊಸಬರಿರ್ವರುಂ ನಡುವೆ ಬಂದಿರಲು
ಮಱಿಯಾಗಿ ದಿಟ್ಟಗಿಟ್ಟಣಿಸಿ ನಿಂದಿರ್ದಿರಲು
ಇಱಿ[23]ದಿಕ್ಕೆಲಕ್ಕೆ[23] ಈಡಾಡುತುಂ [24]ನಡೆತಂ[24]ದು
ಕಱಿಗೊರಲನಂ ನೇಹದಿಂದಪ್ಪಿಕೊಂಡಂದು
ಮಱಿಯಾಗೆ ನಿಮಿಷವದು [25]ಯುಗ[25]ವಾದುದೆನಗರಸ
ಮಱಿಮಾಳ್ಪರೇ ನಿನ್ನ ಭಕ್ತಂಗೆ ಹೇಳರಸ
ಎಂದೊಳಗೆ ನೇಮ[26]ವಂ[26] ಮಾಡುತ್ತ[ಲಿ]ರಲಲ್ಲಿ
ಬಂದು ನೆಱಿ[27]ದಿ[27]ತ್ತು ಭರದಿಂದ ಪುರಜನವಲ್ಲಿ
ನೆರೆದು [28]ತಮ್ಮೊಳಗೆ ಬೆ[28]ಱಗಾಗಿ ನುಡಿದ[29]ರು[29] ನೋಡ
ಹರಭಕ್ತಗಿದು ಗುಣವೆ ಧರೆಗೆ ಚಿತ್ರಂ ನೋಡ

---

[1]ಳು ಹೆಚ್ಚುತಂ (ಚ) [2]ಸು (ಚ) [3]ಚಾಂ (ಚ) [4]ಜಾ (ಚ) [5]ತುಂ (ಕ) [6]ರಲು (ಚ) [7]ಳೇಳ್ದು (ಕ) [8]ಕ್ಕೆಂದು ಬರಲು (ಚ) [9]ದಾ (ಚ) [10]ತುಂ (ಕ) [11]ಹೂ (ಚ) [12]ತುಂ (ಕ) [13]ತಡಿಯ ಲೊಪ್ಪಿರಲು (ಕ) [14]ಮಾಲೆಗಳನೊಪ್ಪಿರಲಿ (ಕ) [15]ತ್ಸವ (ಕ) [16]ಗಳನು (ಕ) [17]ತಂ (ಚ) [18]ರ್ಮದೊಳೆ (ಚ) [19]ರು (ಚ) [20]ತವಿರಲತ್ತಲಿತ್ತಲು (ಕ) ತಿರಲಿತ್ತಲತ್ತಲು (ಚ) [21]ಮಂ (ಚ) [22]ಳಗೊಳ (ಚ) [23]ದು ಪೊರಯಿಂಕೆ (ಚ) [24]ಬಂ (ಕ) [25]ಜುಗ (ಕ) [26]ಮಂ (ಚ) [27]ಯಿ (ಕ) [28]ಬೆ (ಚ) [29]ರು ತಮ್ಮೊಳಗೆ (ಚ)

*ಶರ್ವನಂ ಕಾಣ್ಬ ತವಕಂ ತನಗೆ ಪಿರಿದಾಗೆ। ಶರ್ವಭರವಶಚಿತ್ತದುತ್ತಮಾನನಾಗಿ (ಚ)

ಕೊಂದು ನೇಮಂ ಮಾಳ್ಪುದಿದು ಹೊಸತು ಮೇದಿನಿಗೆ
ಎಂದುವುಂ ಕಂಡಱಿಯೆಯುಬ್ಬಟೆಯ ಧಾರುಣಿಗೆ
ಹೊಱಗೆ ಹೆಣನೊಳಗೆ ನೇಮಂ ಕ[1]ರಂ[1] [2]ಹಸನಾ[2]ಯ್ತು
ಪೊಱಮಡಲು ನೋಡಿಕೊಂಬೆವು [3]ಭಕ್ತಿ[3] ಲೇಸಾಯ್ತು
ಎನುತಿ[4]ರಲು[4] ಪೊಱಮಟ್ಟನಪ್ರತಿಮನಮ್ಮನ್ಮ
ಮನಸಿಜಾರಿಯ ನೇಮಸಂಪನ್ನನಮ್ಮನ್ಮ
ನಡೆತರು[5]ತೆ[5] ಕೆಲಬಲ[6]ದೊಳಿರ್ದ[6] ಹೆಣನಂ ನೋಡಿ
ಮೃಡನಣುಗ[7]ನಿರ್ದ[7]ರುಮನೇಳೇಳೆನಲು ಕೂ[8]ಡಿ[8]
ಎ[9]ಳ್ದು[9] ಕೈಮುಗಿದಿರ್ದರುಂ ಮುಂದೆ ನಿಂದಿರಲು
ತಾಳ್ದು ಕೌತುಕಮನಾ ಪುರಜನಂ ನೆರೆದಿರಲು
ಪುಷ್ಪವೃಷ್ಟಿಗಳೆಱಗಿದವು ಗಗನತಳ[10]ದಿಂದೆ[10]
ಪುಷ್ಪಕಂ ಬಂದುದಗಜಾವರನ [11]ದಯದಿಂದೆ[11]
ಬಂದ ಪುಷ್ಪಕದೊಳಗೆ ನಿಂದಿ[12]ರ್ದ[12]ರುಂ ಸಹಿ[13]ತ[13]
ಸಂದಣಿಸಿ ನೆಗೆದಂ ಚವುಂಡರಾಯಂ ವಿದಿತ
ಆಗಳಾ ಪುರಜನಂ ಬೆಱಗಾಗಿ ನೋಡುತಿರೆ
[14]ರಾಗದಿಂದಂ ಸರ್ವ[14]ರೆಲ್ಲ ಕೊಂಡಾಡುತಿರೆ
ಬಂದು ರಜತಾದ್ರಿಯಂ ಪುಗುವಾಗಳೀಶ್ವರಂ
ನಿಂದಡ್ಡ[15]ವಾದ[15]ರಂ ಸಾರೆನು[16]ತೆ ಶಂಕರಂ[16]*
ಸುರಗಿಯ ಚವುಂಡರಾಯಂ ಬಂದಪಂ ತೊಲಗಿ
ಉರವಣೆಯ ದಿಟ್ಟ[17]ವಾ[17]ರಿಯ ನಿಚ್ಚಟಂ ತೊಲಗಿ
ನಡುವಡ್ಡ[18]ವಾದ[18]ರಂ ಸ್ವೈರಿಸಂ ಕಡುಮಾನಿ
ಪೊಡವಿಯೊಳಗಧಿಕನೆನ್ನಯ [19]ದರ್ಶ[19]ನಧ್ಯಾನಿ
ಎಂದಡ್ಡ[20]ವಾದ[20]ರಂ ತೊಲಗಿಸು[21]ತ ಬರಲ್ಲಿ[21]
ಬಂ[22]ದನೀಶ್ವರನಲ್ಲಿಗಾ[22]ನಂದಮಯ[23]ನಲ್ಲಿ[23]

---

1 ರ (ಕ) 2 ಹೊಸದಾ (ಚ) 3 ಬಕುತಿ (ಕ) 4 ರಲ್ (ಕ) 5 ತ (ಕ) 6 ದಲ್ಲಿದ್ದ (ಕ) 7 ನಿಬ್ಬ (ಕ) 8 ಡೆ (ಚ) 9 ದ್ದು (ಚ) 10 ದೊಳಗೆ (ಚ) 11 ಕೃಪೆಯೊಳಗೆ (ಚ) 12 ಪ್ಪ (ಚ) 13 ತೆ(ಕ) 14 ನಾಗಭೂಷಣಭಕ್ತ (ಚ) 15 ಬಿದ್ದ (ಕ) 16 ತನೀಶ್ವರಂ (ಚ) 17 ಕಾ (ಚ) 18 ಬಿದ್ದ (ಕ) 19 ದರುಶ(ಚ) 20 ಬಿದ್ದ(ಕ) 21 ತ್ತಿರಲಂದು (ಕ) 22 ದು ನಂದೀಶ ನಲಿದಾ (ಕ) 23 ನಾಗಿ (ಕ)

* ಕಿನ್ನರರ ಸುರರ ಕಿಂಪುರುಷರಂ ತೊಲಗೆನುತ। ಪನ್ನಗರು ಗರುಡ ಗಂಧರ್ವರಂ ತೊಲಗೆನುತ | ಉರವಣಿಸದಿರಿ ಹರಿಯಜರು ನಿಲ್ಲಿ ಬಂಡೆಸೆಗೆ | ನೆರೆದ ದೇವರ್ಕಳುಂ ತೊಲತೊಲಗಿ ಬಂದೆಸೆಗೆ (ಚ)

ಸ್ಯೆಗೆಡೆದು ಹರಚರಣವನಪ್ಪಿ[1]ಕೊಂಡಿ[1]ರಲು
ಕ್ಕೈಗ[2]ಳಿದು ನಯನಾಶ್ರು ಕೋಡಿವರಿವು[2]ತ್ತಿರಲು
ನೋಡು ನಂದೀಶ ನಿಚ್ಚಟ ಶರಣ[3]ನಿರ್ಪು[3]ದಂ
ನೋಡು ಕ[4]ಟ್ಟು[4]ಬ್ಬಟೆಯ ನೇಮದಿಂ ಬಾ[5]ಳ್ದ[5]ದಂ
ದಿಟ್ಟವಾರಿಯ ನೇಮದಿಂ ಬಾಳ್ದರಿಂತುಂಟೆ
ದಿಟ್ಟ[6]ಗಂ ಅಡ್ಡ[6]ಬಂದ[7]ರ[7] ಕೊಂದರಿಂತುಂಟೆ
ಅವರಿ[8]ರ್ವ[8]ರು[9]ಮ[9]ನಿಲ್ಲಿ ಒಲಿದು ತಂದವರುಂಟೆ
ಅವನಿಗತಿಚೋದ್ಯಮಂ ಮಾಡಿ ಬಂದವರುಂಟೆ
ಎಂದು ಕೊಂಡಾಡು[10]ತ್ತು[10] ಗಣಕುಲಕೆ ತೋಱುತುಂ
ಇಂದುಮುಖಿ ಪಾರ್ವತಿಗೆ ಬೆಸಸಿ ಕೊಂಡಾಡುತುಂ
ಸುರಗಿಯ ಚವುಂಡರಾ[11]ಯಂ[11]ಗೆ ಗಣಪದವಿತ್ತು
ಹರಭಕ್ತರಿ[12]ರ್ವ[12]ರಿಗೆ ಸಾಲೋಕ್ಯಮುಮನಿತ್ತು
ಶಶಿಧರಂ ವಿಷಧರಂ ಕುಸುಮಶರ ಸಂಹರಂ
ಅಸಮಾಕ್ಷನಕ್ಷಯಂ ದಕ್ಷಮುಖ[13]ಮದ[13]ಹರಂ
ತಾಂಡವಾಡಂಬರಾಂಬ[14]ರವಸನ ವಿಭ್ರಮಂ[14]
ದಂಡ[15]ಧ[15]ರ [16]ತ್ರಿಪುರಹರ[16] ಸಂಹರಣ [17]ವಿಕ್ರಮಂ[17]
ವಿಕ್ರಮ ಧನಂಜಯ ತಪೋವೇಷ ತೋಷಣಂ
ಶಕ್ರಾದಿ ಸುರನಿಕರ ಕಾರುಣ್ಯ[18]ಪೋ[18]ಷಣಂ
ಸುರನರೋರಗನಿಕರ [19]ಕಲ್ಪತರುವೊ[19]ಪ್ಪಿದಂ
ಹರಿಪುರಂದರ ವಿರಿಂಚಿಗಳರಸನೊಪ್ಪಿದಂ
ಪಂಪಾಮುಖಾಂಬುಜ ಸಹಸ್ರಕರನೊಪ್ಪಿದಂ
[20]ಪಂಪಾಪುರಾಧಿಪ ವಿರೂಪಾಕ್ಷ[20]ನೊಪ್ಪಿದಂ

ಕಂ॥ ಪರಮಗುರು ಪರಮಶಾಂತಂ
ಸುರಗಿಯ [21]ಚಾವುಂ[21]ಡರಾಯನವನೆಂದೆನಗಾ
ದರದಿಂ ಕರುಣಿಸುತಿ[22]ಕ್ಕನ
ವರತಂ[22] ಶಶಿಮೌಳಿ ಹಂಪೆಯ ವಿರೂಪಾಕ್ಷಂ

---

1 ಕೊಳುತಿ (ಚ) 2 ಳಿಗೆ ತವಕ ಉರವಣಿಸಿ ಪೊಣ್ಮು (ಚ) 3 ನಿಂದು (ಚ) 4 ಟ್ಟನಿ (ಚ) 5 ಳ್ದು (ಚ) 6 ಗಡ್ಡಂ (ಚ) 7 ರಂ (ಚ) 8 ಬ್ಬ (ಕ) 9 ವ (ಕ) 10 ತಂ (ಚ) 11 ಖಂ (ಚ) 12 ಬ್ಬ (ಕ) 13 ಪುರ (ಕ) 14 ರಂ ಶರಣಶೃತ ವಿಸ್ರಮಂ (ಚ) 15 ರ (ಚ) 16 ಸಂಹನನ (ಕ) 17 ವಿಗ್ರಹಂ (ಚ) 18 ಶೋ (ಚ) 19 ಮಾಲಾಂಗನೊ (ಕ) 20 ಹಂಪೆಯ ವಿರೂಪಾಕ್ಷನನವರತ (ಚ) 21 ಖಂ (ಚ) 22 ಕೆಲ ಸ್ವರಸರ (ಚ)

೨. ಮುಸುಟೆಯ ಚೌಡಯ್ಯಗಳ ರಗಳೆ

ಕಂದ॥ ಬಿಸುಗ[1]ಣ್ಣಂ[1] ಕೆಂಜೆಡೆ[2]ಯಂ[2]
ದೆ[3]ಸೆವುಡುಗೆಯ ನೀಱ ಹಂಪೆಯ [4]ವಿರೂಪಾಕ್ಷಂ[4]
ವಸುಧಾತಳದೊ[5]ಳ್ ಮೆ[5]ಱೆದಂ
ಮುಸುಟೆಯ [6]ಚಾವುಂಡರಾಯನಂ ನಲವಿಂದಂ[6]

ರಗಳೆ॥ ಬಡಗಣ ದಿಶಾಭಾಗದೊಳಗೊಂದು ಶಿವಪುರಂ
ಮೃಡಭಕ್ತಿ ನೆಲೆಗೊಂಡು ಮೆಱೆವುದು ಸವಿಸ್ತರಂ
ಮುಸುಟೆಯೆಂ[7]ಬುದು[7] ಪುರದ ಪೆಸರದಱೊಳೊಪ್ಪುವಂ
ಮುಸುಟೆಯ [8]ಚವುಂ[8]ಡರಾಯಂ ಸುಖಸನಪ್ಪುವಂ
*ಆತನ ಶಿವಾಚಾರಮಂ ಪೇಳಲೆನ್ನಳವೆ
ನೂತನಂ ಧರಣಿತಳಕೆ ಬಣ್ಣಿಸಲೆನ್ನಳವೆ
ಶರಣಾರ್ಥಿ ಎನುತ ಹುಟ್ಟಿದೆನಸುಮ ಜಂಗಮಕೆ
ಶರಣಾರ್ಥಿ ಎನುತ ಬೆಳೆದಂ ಪೊಸತು ಕಲಿಯುಗಕೆ
ಜಂಗಮದ ಪದರೇಣುವಿಡಿದು ತನುವಾದಂತೆ
ಜಂಗಮದ ಪ್ರೇಮವೇ ಜೀವ ತಾನಾದಂತೆ
ಜಂಗಮ ಸ್ನೇಹವೇ ಜಿಹ್ವಾಗ್ರವಾದಂತೆ
ಜಂಗಮದ ನೋಟವೇ ತನಗೆ ಕಣ್ಣಾದಂತೆ
ಜಂಗಮ ಸ್ತೋತ್ರವೇ [9]ತನಗೆ ಕಿವಿಯಾದಂತೆ[9]
ಜಂಗಮದ [10][ಜಿಹ್ವೆಯೇ][10] ತನಗೆ ಬಾಯಾದಂತೆ
ಜಂಗಮದ ನಾಸಿಕ [11]ತನಗೆ[11] ಘ್ರಾಣವಾದಂತೆ
ಜಂಗಮಸ್ಪರ್ಶನವೆ ತನಗೆ ಸೋಂಕಾದಂತೆ*

---

1 ಣ್ಣಂ (ಚ) 2 ಯಿಂ (ಚ) 3 ಸಪ್ತತುಪತಿಯಿಂದ ಮೆರವ (ಚ) 4 ರಾಯ (ಚ) 5 ಳಿವೆ (ಚ) 6 ಚೌಂಡರಾಯನಂ ಧಾರಿಣಿಯೊಳ್ (ಚ) 7 ಬಾ (ಚ) 8 ಚೌಂ (ಚ) 9 ಜಿಹ್ವೆಯಾಗಿರ್ದಂತೆ (ಕ) 10 ಜಿಂಹ್ವೆ (ಚ) 11 ವೆ (ಕ)

* ಈ ಭಾಗ 'ಕ' ಪ್ರತಿಯಲ್ಲಿಲ್ಲ.

ಜಂಗಮಕ್ಕೊಂದವಯವಂ ಪಿಡಿದು ನಡೆದಂತೆ
ಲಿಂಗಜಂಗಮಭಕ್ತನೊಪ್ಪು[1]ವಂ[1] ತಾನಿಂತೆ
ಕನಸಿನೊಳ್ ಮನಸಿನೊಳ್ ಶರಣಾರ್ಥಿಯೆಂ[2]ದೆನುತೆ[2]
ನೆನಹಿನೊಳ್ ನಿಷ್ಠೆ[3]ಯೊಳ್[3] ಶರಣಾರ್ಥಿಯೆಂ[4]ದೆನುತೆ[4]
ನಡೆವಲ್ಲಿ ನುಡಿವಲ್ಲಿ ಶರಣಾರ್ಥಿಯೆಂದೆನುತೆ
ಕೊಡುವಲ್ಲಿ ಕೊಂಬಲ್ಲಿ ಶರಣಾರ್ಥಿಯೆಂದೆನುತೆ
ಕಂಡಡಂ ಕಾಣದೊಡೆ ಶರಣಾರ್ಥಿಯೆಂದೆನುತೆ
ತಂಡತಂಡದ ನುಡಿ[5]ಗೆ[5] ಶರಣಾರ್ಥಿಯೆಂದೆನುತೆ
ಇರುಳುವುಂ ಪಗಲುವುಂ ಶರಣಾರ್ಥಿಯೆಂದೆನು[6][ತೆ][6]
[7]ಮರುಳುಗೊಂಡಂತೊಗೆದು ಶರಣಾರ್ಥಿಯೆಂದೆನುತೆ[7]
ನುಡಿಯೊಳಗೆ ಪಂಚಾಕ್ಷರಿಯ ಪದಂ ನೆಲಸಿತ್ತು
[8]ನಡೆ[8]ಯೊಳಗೆ ಮೃಡನ ರೂಪ[9]ಕ್ಕೆ[9]ಜಂ ನೆಲಸಿತ್ತು
ಶಿವನ [10]ಸಾಮರ್ಥ್ಯವಾ ನುಡಿಯೊಳಗೆ ಬೆಳೆಯಿತ್ತು[10]
ಭವನ ತೇಜಂ [11]ನಿತ್ಯ ಕರಣದೊಳು ತಳೆಯಿತ್ತು[11]
ಇಂತೆ[12]ಸೆದಿರುತ್ತಮಿ[12]ರುತಿಪ್ಪೊಂದು ದಿವಸದೊಳು
ಕಂತುವೈರಿಯ ಮಜ್ಜನಕ್ಕೆ ಸಂತೋಷದೊಳು
ಮುಸುಟಿಯ ಚವುಂಡರಾಯಂ ಹರುಷದಿಂ ಬಂದು
ಎಸೆವ ನಿರ್ಮಳ ಸರೋವರ ಮಧ್ಯದೊಳ್ ನಿಂದು
ಹೊಂಗೊಡಂಗಳೊಳಗ್ಘವಣೆಯನೊಲವಿಂ ತೀವಿ
ಸಿಂಗರಿಸಿ ಬಾಸಣಿಸಿ ಕಡುನೇಹದಿಂದೋವಿ
ಹೂವಿನ ಕರಂಡಗೆಯ ಕಂಬಿಯೊಳ್ ಕೈಗೊಳಿಸಿ
ಭಾವಕಮೊಳಡಿಯಿಟ್ಟು ಬರುತಮಿರೆ [13]ಸಡ[13]ಗರಿಸಿ
ಬಂದೂರ ಬಾಗಿಲಂ ಭರದಿಂದ ಪೊಗುವಲ್ಲಿ
ಸಂದಣಿಸಿ ಬರುತಿರ್ದುದೊಂದು ಕೇಳಿಕೆಯಲ್ಲಿ
ಮುರ[14]ಜವಾ[14]ವುಜದ ಗಿಜಿಗಟಿಯ ನಾದಂಗಳಿಂ
ಶರಣ ಸಂತಾನದ ಶಿವಪ್ರಘೋಷಂಗಳಿಂ

---

[1] ತೂಂ (ಕ) [2] ದೆಂಬ (ಚ) [3] ಯಿಂ (ಕ) [4] ದೆಂಬ (ಚ) [5] ಯ (ಕ) [6] ತಿಪ್ಪ (ಕ) [7] ಶರಣು ಶರಣಾರ್ಥಿ ಶರಣಾರ್ಥಿಯೆಂದೆನುತಿಪ್ಪ (ಕ) [8] ನುಡಿ (ಕ) [9] ಕ್ಕೆ (ಕ) [10] ಸಂತೋಷ ಮೇಲವಯವದಿ ನೆಲಸಿತ್ತು (ಚ) [11] ಸತ್ಯವಚನದೊಳ್ ನೆಲಸಿತ್ತು (ಕ) [12] ತು ಸೇರುತ್ತವಿ (ಕ) [13] ಸಿಂ (ಚ) [14] ಜೆಯಾ (ಕ)

ಭ[1]ಕ್ತ[1]ತತಿ ಹೊತ್ತು [2]ವಿಸ್ತ[2]ರಿಸಿದ ವಿಮಾನದಿಂ
ಭ[3]ಕ್ತ[3]ನಂ ರಜತಗಿರಿಗೈ[4]ದಿಸುವ ಚಂದದಿಂ[4]
ಬರುತಿರೆ ವಿಮಾನದೊಳಗಣ ಭಕ್ತನಂ ಕಂಡು
ಅ[5]ರರರ[5]ರೆ ಮುಸುಟೆಯ ಚ[6]ವುಂಡರಾಯಂ[6] ಕಂಡು
ಶರಣಾರ್ಥಿ ದೇವ ಶರ[7]ಣೆನುತ[7] ಕೈಯಂ ಮುಗಿ[8]ಯೆ[8]
ಶರಣು ಗಿರಿಜಾವರನೆ ಕರುಣಿಸೆನು[9]ತಂ ನಲಿಯೆ[9]
ನೆರೆದ ಶಿವಭಕ್ತರೆಲ್ಲರು ನೋಡಿ ಬೆಱಗಾ[10]ಗೆ[10]
